ಕೋಲಾರ ವಿಭಾಗದ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಕೋಲಾರ ಅರಣ್ಯ ವಿಭಾಗದ ವಿವಿಧ ತಾಲ್ಲೂಕಿನ ಅರಣ್ಯದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸಿ ಉಳಿದಿರುವ ಈ ಕೆಳಗೆ ಕಾಣಿಸಿದ ತಾಲ್ಲೂಕು ಅರಣ್ಯ ಪ್ರದೇಶದಲ್ಲಿರುವ ಹುಣಸೆ ಫಸಲು, ರಸ್ತೆ ಬದಿ ಹುಣಸೆ ಫಸಲು, ಸಿಟ್ರಡೋರಾ, ತೂಪ್ರ ಎಲೆ ಮತ್ತು ಸೀತಾಫಲ ಫಸಲು ಗುತ್ತಿಗೆ ಮಾರಾಟವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ಅಥವಾ ಅವರಿಂದ ನೇಮಿಸಲ್ಪಟ್ಟ ಇತರೆ ಅಧಿಕಾರಿಗಳಿಂದ ಟೆಂಡರ್ -ಕಂ- ಹರಾಜನ್ನು ದಿನಾಂಕ 28-10-2009ರಂದು ಅಪರಾಹ್ನ 3-00 ಗಂಟೆಗೆ ಮಾಡಲಾಗುವುದು. ಟೆಂಡರ್ ಫಾರಂಗಳನ್ನು ದಿನಾಂಕ 27-10-2009ರಂದು ಸಂಜೆ 5.30 ಗಂಟೆಯವರೆಗೆ ಕೊಡಲಾಗುವುದು. ಪ್ರತಿ ಟೆಂಡರ್ ಫಾರಂನ ಬೆಲೆ ರೂ.200-00 (ಇನ್ನೂರು ರೂಪಾಯಿ) ಮತ್ತು ತೆರಿಗೆಗಳು ಮಾತ್ರ. ಮೇಲ್ಕಂಡ ದಿನಾಂಕದಂದು ಟೆಂಡರ್-ಕಂ-ಹರಾಜು ಕಾರಣಾಂತರದಿಂದ ನಡೆಯದಿದ್ದಲ್ಲಿ ಅಥವಾ ಬಾಕಿ ಉಳಿಯುವ ಘಟಕಗಳ ಟೆಂಡರ್-ಕಂ-ಹರಾಜನ್ನು ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ 31-10-2009ರಂದು ಮರು ಹರಾಜು ಮಾಡಲಾಗುವುದು. ಇದಕ್ಕೆ ಟೆಂಡರು ಫಾರಂಗಳನ್ನು ದಿನಾಂಕ 30-10-2009ರಂದು ಕಛೇರಿ ವೇಳೆಯಲ್ಲಿ ನೀಡಲಾಗುವುದು. ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸುವುದಿಲ್ಲ. ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

2009-10¼ó àñÒ¼ Yô®Y ÔïñÊñv Ôïñ¤ôÔ bvP¹ äàÊô
(KN¹ô ÔÝÌ¹ AÔºY Ôïñ¬)

PÍ. àN.	AÊ§ E¬¼¹ äàÊô	¬ñÐöPô	AÊ§ ¿¹óÙ¹ äàÊô	
1	ಸಿಟ್ರಡೋರಾ	ಕೋಲಾರ	1.	ಕೋಲಾರ ತಾಲ್ಲೂಕು
		ಶ್ರೀನಿವಾಸಪುರ	2.	ಶ್ರೀನಿವಾಸಪುರ ತಾಲ್ಲೂಕು
		ಮುಳಬಾಗಿಲು	3.	ಮುಳಬಾಗಿಲು ತಾಲ್ಲೂಕು
		ಮಾಲೂರು	4.	ಮಾಲೂರು ತಾಲ್ಲೂಕು
2	ಹುಣಸೆ ಫಸಲು	ಬಂಗಾರಪೇಟೆ	1.	ಬಂಗಾರಪೇಟೆ ತಾಲ್ಲೂಕು ಅರಣ್ಯ (ಕೆಎಸ್‌ಎಫ್-VI ಬ್ಲಾಕ್ ಹೊರತುಪಡಿಸಿ)
			2.	ಕಾರಬೆಲೆ ನೆಡುತೋಪು
		ಮಾಲೂರು	3.	ದಿನ್ನೇರಿ ನೆಡುತೋಪು
			4.	ಲಕ್ಷ್ಮೀಸಾಗರ ನೆಡುತೋಪು (ಶ್ರೀ ವೇಣು ಗೋಪಾಲ ಸ್ವಾಮಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಗೆ ಒಳಪಡುತ್ತದೆ)
			5.	ನ್ಯೂ ಕೂರಂಡಹಳ್ಳಿ ನೆಡುತೋಪು (ಸೀತನಾಯಕನ ಹಳ್ಳಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಗೆ ಒಳಪಡುತ್ತದೆ)
		ಕೋಲಾರ	6.	ವಕ್ಕಲೇರಿ ನೆಡುತೋಪು
			7.	ಗಾಜಲದಿನ್ನೆ ನೆಡುತೋಪು
		ಮುಳಬಾಗಿಲು	8.	ಕಾಶೀಪುರ ನೆಡುತೋಪು
		ಶ್ರೀನಿವಾಸಪುರ	9.	ರಾಯಲ್ಪಾಡು 1ರಿಂದ 4ನೇ ಬ್ಲಾಕ್
			10	ಕಲ್ಲೂರು – ಮಣಿಗಾನಹಳ್ಳಿ
3	ರಸ್ತೆ ಬದಿ ಹುಣಸೆ ಫಸಲು	ಕೋಲಾರ	1.	ಕೋಲಾರ ತಾಲ್ಲೂಕು ರಸ್ತೆ ಬದಿ
		ಶ್ರೀನಿವಾಸಪುರ	2.	ಶ್ರೀನಿವಾಸಪುರ ತಾಲ್ಲೂಕು ರಸ್ತೆ ಬದಿ
		ಮಾಲೂರು	3.	ಮಾಲೂರು ತಾಲ್ಲೂಕು ರಸ್ತೆ ಬದಿ
		ಮುಳಬಾಗಿಲು	4.	ಮುಳಬಾಗಿಲು ತಾಲ್ಲೂಕು ರಸ್ತೆ ಬದಿ
		ಬಂಗಾರಪೇಟೆ	5.	ಬಂಗಾರಪೇಟೆ ತಾಲ್ಲೂಕು ರಸ್ತೆ ಬದಿ (ಟ್ರೀಪಟ್ಟಾ ನೀಡಿರುವ ಮರಗಳನ್ನು ಹೊರತುಪಡಿಸಿ)
4	ತೂಪ್ರ ಎಲೆ	ಕೋಲಾರ	1.	ಕೋಲಾರ ತಾಲ್ಲೂಕು
		ಶ್ರೀನಿವಾಸಪುರ	2.	ಶ್ರೀನಿವಾಸಪುರ ತಾಲ್ಲೂಕು
		ಮುಳಬಾಗಿಲು	3.	ಮುಳಬಾಗಿಲು ತಾಲ್ಲೂಕು
5	ಸೀತಾಫಲ	ಬಂಗಾರಪೇಟೆ		ಬಂಗಾರಪೇಟೆ ತಾಲ್ಲೂಕು (ಕೆಎಸ್‌ಎಫ್-VI ಬ್ಲಾಕ್ ಹೊರತುಪಡಿಸಿ)

ÝÊ¬ôYçô

1. ಇ.ಎಂ.ಡಿ.ಯನ್ನು ಪ್ರತಿ ಘಟಕಕ್ಕೆ ರೂ. 5000-00ರಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರರವರ ಪರ ತೆಗೆದು ಟೆಂಡರ್‌ನೊಡನೆ ಸಲ್ಲಿಸಬೇಕು.
2. ಬಿಡ್‌ನಲ್ಲಿ ಭಾಗವಹಿಸುವವರು ಬಿಡ್‌ಗೆ ಮುಂಚೆ ನಿಯಮಾನುಸಾರ ಕನಿಷ್ಟ 5000-00 ರೂ.ಗಳ ಮುಂಗಡ ಠೇವಣಿ ಹಣವನ್ನು ಪಾವತಿಸಬೇಕು.
3. ಕೋಲಾರ ವಿಭಾಗದಲ್ಲಿ 2009-10ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿರುವವರು ಮಾತ್ರ ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಇತರರಿಗೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
4. ಟೆಂಡರ್ ಫಾರಂಗಳನ್ನು ದಿನಾಂಕ 28-10-2009ರಂದು ಜರುಗುವ ಹರಾಜಿಗೆ 27-10-2009 ಮತ್ತು 31-10-2009ರಂದು ಜರುಗುವ ಹರಾಜಿಗೆ ದಿನಾಂಕ 30-10-2009ರಂದು ಕಛೇರಿ ಕೆಲಸದ ವೇಳೆಯಲ್ಲಿ ಕೊಡಲಾಗುವುದು. ಒಂದು ಟೆಂಡರ್ ಫಾರಂ ಬೆಲೆ ರೂ. 200-00 ಮತ್ತು ತೆರಿಗೆಗಳು ಪ್ರತ್ಯೇಕ.

5 ಮೇಲ್ಕಂಡ ಮಾರಾಟವನ್ನು ಒಪ್ಪುವುದು ಅಥವಾ ನಿರಾಕರಿಸುವುದು ಅರಣ್ಯ ಇಲಾಖಾ ಪ್ರಾಧಿಕಾರವುಳ್ಳ ಅಧಿಕಾರಿಗಳವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

6 ಮೊಹರಾದ ಟೆಂಡರ್ ನಮೂನೆಗಳನ್ನು ದಿನಾಂಕ 28-10-2009ರಂದು ಮತ್ತು ದಿನಾಂಕ 31-10-2009ರಂದು ಮಧ್ಯಾಹ್ನ 1-00 ಗಂಟೆಯವರೆಗೆ ಸಲ್ಲಿಸಬಹುದು.

7 ಯಶಸ್ವಿ ಟೆಂಡರು / ಬಿಡ್‌ದಾರರು ಶೇ. 50ರಷ್ಟು ಹಣವನ್ನು ಮತ್ತು ಎಲ್ಲಾ ಅರ್ಹ ತೆರಿಗೆಗಳನ್ನು ಮಾರಾಟ ಮುಗಿದ ತಕ್ಷಣ ಅದೇ ದಿನ ಪಾವತಿಸಬೇಕು. ಹರಾಜು ಮಾರಾಟ ದೃಢೀಕರಣ ಆದೇಶ ನೀಡಿದ ನಂತರ ಕರಾರು ಪತ್ರ ಮಾಡಿಕೊಂಡು ಆ ಸಮಯದಲ್ಲಿ ಬಾಕಿ ಉಳಿದ 50%ರ ಪೂರ್ತಿ ಹಣ ಪಾವತಿ ಮಾಡಬೇಕು. ಇಲ್ಲದಿದ್ದಲ್ಲಿ ಅದರ ಇ.ಎಂ.ಡಿ. ಹಣವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಆ ಘಟಕವನ್ನು ಅವರ ಜವಾಬ್ದಾರಿಯಲ್ಲಿ ಮರು ಹರಾಜು ಮಾಡಲಾಗುವುದು. ಇದರಿಂದ ಏನಾದರೂ ನಷ್ಟವುಂಟಾದಲ್ಲಿ ಅಂತಹ ನಷ್ಟವನ್ನು ಮೂಲ ಬಿಡ್ ಟೆಂಡರುದಾರರಿಂದ ನಿಯಮಾನುಸಾರ ವಸೂಲು ಮಾಡಲಾಗುವುದು.

8 ಕಪ್ಪು ಪಟ್ಟಿಗೆ ಸೇರಿರುವವರು, ಇನ್‌ಸಾಲ್‌ವೆಂಟ್ಸ್, ಡಿಫಾಲ್ಟರ್ಸ್ ಮತ್ತು ಮೈನರ್ಸ್ ಟೆಂಡರ್ ಸಲ್ಲಿಸುವುದಕ್ಕಾಗಲೀ ಬಿಡ್‌ನಲ್ಲಿ ಭಾಗವಹಿಸುವುದಕ್ಕಾಗಲೀ ಅರ್ಹರಲ್ಲ.

9 ಯಾವುದೇ ಘಟಕವನ್ನು ಟೆಂಡರ್‌ನಿಂದ ಕೈಬಿಡುವ ಅಥವಾ ಸೇರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ರವರಿಗೆ ಇರುತ್ತದೆ.

10 ಉಳಿದ ವಿವರಗಳು ಮತ್ತು ಷರತ್ತುಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ರವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

X¿ ª:

1 ಲಕ್ಷ್ಮೀಸಾಗರ ನೆಡುತೋಪಿನ ಫಸಲಿನಿಂದ ಬರುವ ಆದಾಯವನ್ನು ನಿಯಮಾನುಸಾರ ಶ್ರೀ ವೇಣುಗೋಪಾಲ ಸ್ವಾಮಿ ಗ್ರಾಮ ಅರಣ್ಯ ಸಮಿತಿಗೆ ನೀಡಲಾಗುವುದು.

2 ನ್ಯೂಕೂರುಂಡಹಳ್ಳಿ ನೆಡುತೋಪಿನ ಫಸಲಿನಿಂದ ಬರುವ ಆದಾಯವನ್ನು ನಿಯಮಾನುಸಾರ ಸೀತನಾಯಕನಹಳ್ಳಿ ಗ್ರಾಮ ಅರಣ್ಯ ಸಮಿತಿಗೆ ನೀಡಲಾಗುವುದು.

ಪಿ.ಆರ್. 878 ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ, ಕೋಲಾರ.

ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಸಾಗರ ವಿಭಾಗ, ಸಾಗರ

ಹರಾಜು ಪ್ರಕಟಣೆ

ಕ್ರ:ಎ5/ಎಸ್‌ಎಎಸ್/ಸಿಆರ್/3/09-10, ಸಾಗರ, ದಿನಾಂಕ: 8ನೇ ಅಕ್ಟೋಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಬಯಸುವುದೇನೆಂದರೆ, ಸಾಗರ ಅರಣ್ಯ ವಿಭಾಗದ ಈ ಕೆಳಗೆ ನಮೂದಿಸಿದ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ಬೀಟೆ, ಸಾಗುವಾನಿ ಹಾಗೂ ಇತರೆ ಜಾತಿಯ ನಾಟಾ, ಸೌದೆ, ಎಳೆ ಇತ್ಯಾದಿಗಳನ್ನು ಆಯಾ ಡಿಪೋವಿನ ಎದುರು ಸೂಚಿಸಿದ ದಿನಾಂಕಗಳಂದು ಬಹಿರಂಗ ಹರಾಜು ಮಾರಾಟದಲ್ಲಿ ವಿಕ್ರಯಿಸಲು ಸಾಮಾನ್ಯ ಅವಗಾಹನೆಗಾಗಿ ಪ್ರಕಟಿಸಿದೆ.

ಕ್ರ. ಸಂ.	ನಾಟಾ ಸಂಗ್ರಹಾಲಯದ ಹೆಸರು	ಹರಾಜಿನ ದಿನಾಂಕ ಮತ್ತು ವೇಳೆ	ಹಾಲಿ ದಾಸ್ತಾನು ವಿವರ (ಎಂ3/ನಂ.ಗಳಲ್ಲಿ)	
(2)	ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ	ದಿ: 06–11–2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳು ವವರೆಗೆ	ಬೀಟೆ	6.264
			ಸಾಗುವಾನಿ	2.125
			ಹೆಚ್.ಹಲಸು	7.903
			ಹಲಸು	0.948
			ಇತರೆ ಜಾತಿ	1.632
			ಅಕೇಶಿಯಾ ನಾಟಾ	25.942
			ಬೀಟೆ ಎಳೆಗಳು	20 ಸಂಖ್ಯೆ
			ಸಾಗುವಾನಿ ಎಳೆಗಳು	56 ಸಂಖ್ಯೆ
			ಅಕೇಶಿಯಾ ಎಳೆಗಳು	429 ಸಂಖ್ಯೆ
			ಬೀಟೆ ಸೈಜು	0.999
			ಸಾಗುವಾನಿ ಸೈಜು	1.493
			ಅಕೇಶಿಯಾ ಬಿಲ್ಲೆಟ್ಸ್	3.465
			ಕಾಡುಜಾತಿ, ಅಕೇಶಿಯಾ ಸೌದೆ	18.425

ಕ್ರ. ಸಂ.	ನಾಟಾ ಸಂಗ್ರಹಾಲಯದ ಹೆಸರು	ಹರಾಜಿನ ದಿನಾಂಕ ಮತ್ತು ವೇಳೆ	ಹಾಲಿ ದಾಸ್ತಾನು ವಿವರ (ಎಂ3/ನಂ.ಗಳಲ್ಲಿ)	
(3)	ಸರ್ಕಾರಿ ನಾಟಾ ಸಂಗ್ರಹಾಲಯ, ಹೊಸನಗರ	ದಿ: 07–11–2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳು ವವರೆಗೆ	ಬೀಟೆ	3.307
			ಸಾಗುವಾನಿ	1.503
			ಹೊನ್ನೆ	3.266
			ಹಲಸು	3.283
			ನೇರಲು	2.743
			ಹುನಾಲು	2.396
			ಇತರೆ ಜಾತಿ	1.540
			ಅಕೇಶಿಯಾ ನಾಟಾ	27.299
			ಅಕೇಶಿಯಾ ಬಿಲ್ಲೆಟ್ಸ್	3.000
			ಇತರೆ ಜಾತಿ ಸೈಜು	3.594
1)	ಸರ್ಕಾರಿ ನಾಟಾ ಸಂಗ್ರಹಾಲಯ, ಆನವಟ್ಟಿ	ದಿ: 09–11–2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳು ವವರೆಗೆ	ಬೀಟೆ	7.300
			ಸಾಗುವಾನಿ	15.488
			ದೇವದಾರಿ	1.454
			ಮತ್ತಿ	2.135
			ಇತರೆ ಜಾತಿ	16.632
			ಅಕೇಶಿಯಾ ನಾಟಾ	44.502
			ನೀಲಗಿರಿ ನಾಟಾ	2.678
			ಹುನಾಲು	2.135
			ಅಕೇಶಿಯಾ ಎಳೆ	64 ಸಂಖ್ಯೆ
			ಸಾಗುವಾನಿ ಎಳೆ	12 ಸಂಖ್ಯೆ.
(4)	ಸರ್ಕಾರಿ ನಾಟಾ ಸಂಗ್ರಹಾಲಯ, ಶಿಕಾರಿಪುರ	ದಿ: 10–11–2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳು ವವರೆಗೆ	ಬೀಟೆ	7.678
			ಸಾಗುವಾನಿ	3.777
			ತಡಸಲು	1.927
			ಇತರೆ	7.682
			ಸೈಜು	0.689

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

OFFICE OF THE DEPUTY CONSERVATOR OF FORESTS, SAGAR DIVISION, SAGAR

No.A5/SAS/CR/3/09-10, Sagar, Dated: 8th October 2009

BRIEF SALE NOTIFICATION

It is hereby notified for general information of the public that Beete, Teak, Other kind timber, poles and firewood available in the following Govt.Timber Depots of Sagar Forest Division will be sold in public auction on the dates shown against each depot.

Sl. No.	Name of the Depots	Date & time of Auction sale	Approximate quantity of timber, Firewood, R.K.Billets etc., are exposed for sale.	
1	Govt.Timber Depot, Sagar	06-11-2009 at 10.00 a.m. upto end of sale	Beete	6.264
			Teak	2.125
			H.Halasu	7.903
			Halasu	0.948
			Other Kind timber	1.632
			Accacia timber	25.942
			Beete poles.	20 Nos.
			Teak poles.	56 Nos.
			Accacia poles	429 Nos.

Sl. No.	Name of the Depots	Date & time of Auction sale	Approximate quantity of timber, Firewood, R.K.Billets etc., are exposed for sale.	
			Beete size.	0.999
			Teak size	1.493
			Accacia billets.	3.465
			J.wood/Accacia Firewood.	18.425
2	Govt.Timber Depot, Hosanagar	07-11-2009 at 10.00 a.m. upto end of sale	Beete	3.307
			Teak	1.503
			Honne	3.266
			Halasu	3.283
			Neralu	2.743
			Hunalu	2.396
			Other kind timber	1.540
			Accacia timber	27.299
			Accacia Billets.	3.000
			Other kind size.	3.594
3	Govt.Timber Depot, Anavatti	09-11-2009 at 10.00 a.m. upto end of sale	Beete	7.300
			Teak	15.488
			Devadari	1.454
			Mathi	2.135
			Other kind Timber	16.632
			Accacia timber	44.502
			Neelagiri timber	2.678
			Hunalu	2.135
			Accacia poles	64 Nos.
			Teak poles.	12 Nos.
4	Govt.Timber Depot, Shikaripurar	10-11-2009 at 10.00 a.m. upto end of sale	Beete	7.678
			Teak	3.777
			Thadasalu	1.927
			Other Kind timber	7.682
			Size	0.689

P.R. 869 Deputy Conservator of Forests, Sagar Division, Sagar.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ

ವಿವಿಧ ಫಸಲಿನ ಸಂಕ್ಷಿಪ್ತ ಟೆಂಡರ್ ಕಂ ಹರಾಜು ಪ್ರಕಟಣೆ

ಬಹಿರಂಗ ಟೆಂಡರ್ ಕಂ ಹರಾಜು ಪ್ರಕಟಣೆ

ಸಂಖ್ಯೆ : ಎ6/ಸೇಲ್ಸ್/ವಿವಿಧ ಫಸಲು/ಸಿಆರ್–32/2009–10, ದಿನಾಂಕ: 25ನೇ ಸೆಪ್ಟೆಂಬರ್ 2009

ವಿಷಯ: ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ (ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು 5) ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ ಗಳ ಟೆಂಡರ್ / ಹರಾಜು ಕುರಿತು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ

(ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು 5) ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ 2009–10ರ (ವಾರ್ಷಿಕ) ಅವಧಿಗೆ ಅಂದರೆ **ದಿನಾಂಕ: 01–07–2009 ರಿಂದ 30–06–2010 ರ** ಅವಧಿಗೆ ಅಥವಾ ಟೆಂಡರ್ / ಹರಾಜು ಒಪ್ಪಿಕೊಂಡ ದಿನದಿಂದ **30ನೇ ಜೂನ್ 2010** ರವರೆಗೆ ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗೆ ತಪ್ಸೀಲಿನಲ್ಲಿ ಸೂಚಿಸಿರುವ ಪ್ರಕಾರವಾಗಿ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಇಷ್ಟವುಳ್ಳ ನೊಂದಾಯಿತ ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು.

ಪ್ರಕಟಣೆಯಲ್ಲಿ ನಮೂದಿಸಿರುವ ಅರಣ್ಯೋತ್ಪನ್ನವು ನಿರ್ಧರಿತ ಬಂಜರು ಭೂಮಿ, ಗೋಮಾಳ, ಹರಾಜು ಗ್ರಾಮ ಠಾಣ ಮತ್ತು ಸಮುದಾಯ ಉದ್ದೇಶಕ್ಕಾಗಿ ಬಿಟ್ಟಿರುವ ಪ್ರದೇಶಗಳು ತಹಶೀಲ್ದಾರರಿಂದ ಪ್ರತ್ಯೇಕವಾಗಿ ಮಾರಾಟ ಮಾಡಿರುವ ಮತ್ತು ಮಾರಲ್ಪಡುವ ಪ್ರದೇಶಗಳು, ಮುನ್ಸಿಪಲ್, ನಗರಸಭೆ, ಜಿಲ್ಲಾಪಂಚಾಯತ್, ಮಂಡಲ ಪಂಚಾಯತ್, ಗ್ರಾಮಪಂಚಾಯತ್ ಹಾಗೂ ಈ ವಿಭಾಗದ ನಿಯಂತ್ರಣಕ್ಕೆ ಒಳಪಡದೆ ಇರುವ ಪ್ರದೇಶಗಳನ್ನು ಹೊರತುಪಡಿಸಿ ಈ ಟೆಂಡರ್ ಕಂ ಹರಾಜಿನಲ್ಲಿ ಕೈಬಿಟ್ಟಿರುತ್ತದೆ.

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
I). ಸಿಟ್ರಿಡೋರ ಎಲೆ ಫಸಲು.					
1	ಮಾಗಡಿ ತಾಲ್ಲೂಕು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್.
II). ತೂಪ್ರ ಎಲೆ (ಬೀಡಿ ಎಲೆ) ಫಸಲು					
1	ಚನ್ನಪಟ್ಟಣ ತಾಲ್ಲೂಕು	– " –	– " –	– " –	– " –
2	ಕನಕಪುರ ತಾಲ್ಲೂಕು,	– " –	– " –	– " –	– " –
3	ರಾಮನಗರ ತಾಲ್ಲೂಕು	– " –	– " –	– " –	– " –
4	ಮಾಗಡಿ ತಾಲ್ಲೂಕು	– " –	– " –	– " –	– " –
5	ಸಾತನೂರು ವಲಯ				
III). ಹುಣಸೆ ಫಸಲು					
1.	ಚನ್ನಪಟ್ಟಣ ತಾಲ್ಲೂಕು	– " –	– " –	– " –	– " –
2.	ರಾಮನಗರ ತಾಲ್ಲೂಕು (ಕೂನಗಲ್ ಕಿರು ಅರಣ್ಯ ಪ್ರದೇಶ ಹೊರತುಪಡಿಸಿದೆ)	– " –	– " –	– " –	– " –

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
3.	ಕನಕಪುರ ತಾಲ್ಲೂಕು, ಕನಕಪುರ ಭಾಗ–1, ತೋಕಸಂದ್ರ ಬೀಟ್, ಮರಳವಾಡಿ ಬೀಟ್, ತೇರುಬೀದಿ ಬೀಟ್, ಗೌಡಹಳ್ಳಿ ಬೀಟ್ (ರಾಮಸ್ವಾಮಿ ದೇವಸ್ಥಾನ ಪ್ರದೇಶ)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್.
4.	ಕನಕಪುರ ತಾಲ್ಲೂಕು, ಕನಕಪುರ ಭಾಗ–2, ರ ಕಾಡುಶಿವನಹಳ್ಳಿ ಬೀಟ್, ಹಂಚಿಗುಳಿ ಬೀಟ್, ಗೌಡಹಳ್ಳಿ ಭಾಗ (ಕಾಳೇಗೌಡನಹಳ್ಳಿ ಕೆರೆ ಪ್ರದೇಶ)	– " –	– " –	– " –	– " –
5.	ಕನಕಪುರ ತಾಲ್ಲೂಕು, ಕನಕಪುರ ಭಾಗ–3, ಚವರ್‌ಕಲ್ ಬೀಟ್, ಮುಗ್ಗೂರು ಬೀಟ್ (ವನ್ಯಪ್ರಾಣಿ ವಿಭಾಗಕ್ಕೆ ಸೇರಿದ ಪ್ರದೇಶವನ್ನು ಬಿಟ್ಟು) ಕೋಟೆಕೊಪ್ಪ ಬೀಟ್ ದಿಂಬದಹಳ್ಳಿ ಬೀಟ್, ಮುನೇಶ್ವರ ಬೀಟ್	– " –	– " –	– " –	– " –
6.	ಕನಕಪುರ ತಾಲ್ಲೂಕು, ಕನಕಪುರ ಭಾಗ–4, ಮಂಜುನಾಥ್ ಬೀಟ್, ರಾಮದೇವರ ಬೆಟ್ಟ ಬೀಟ್, ಗರಳಾಪುರ ಬೀಟ್, ನಾರಾಯಣಪುರ ಬೀಟ್	– " –	– " –	– " –	– " –

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
7.	ಮಾಗಡಿ ತಾಲ್ಲೂಕು ಸಾವನದುರ್ಗ ಸ್ಟೇಟ್ ಫಾರೆಸ್ಟ್‌ನಲ್ಲಿ ಅರಣ್ಯ ಕೃಷಿಕರು ಮಾಡುತ್ತಿದ್ದ 35 ಹುಣಸೆಮರ ಸೇರಿ (280 ಹೆಕ್ಟೇರ್ ಎಂ.ಪಿ.ಸಿ.ಎ, 300 ಹೆಕ್ಟೇರ್ ಎ.ಎಫ್.ಸಿ ಪ್ರದೇಶ ಬಿಟ್ಟು)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್.
8.	ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು)	– " –	– " –	– " –	– " –

IV). ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು

1.	ಮಾಗಡಿ ತಾಲ್ಲೂಕು (ರಾಷ್ಟ್ರೀಯ ಹೆದ್ದಾರಿ ಬಿಟ್ಟು ಮಾಗಡಿ ತಾಲ್ಲೂಕಿನ ಸರಹದ್ದಿನಲ್ಲಿ ಬರುವ ಎಲ್ಲಾ ಮುಖ್ಯ ರಸ್ತೆಗಳು)	– " –	– " –	– " –	– " –
2.	ಚನ್ನಪಟ್ಟಣ ತಾಲ್ಲೂಕು (ಚನ್ನಪಟ್ಟಣ ತಾಲ್ಲೂಕಿನಲ್ಲಿ ಬರುವ ಬೆಂಗಳೂರು ಮೈಸೂರು ರಾಜ್ಯ ಹೆದ್ದಾರಿ ಮತ್ತು ಇದರ ಸರಹದ್ದಿನಲ್ಲಿ ಬರುವ ಮುಖ್ಯ ರಸ್ತೆಗಳು)	– " –	– " –	– " –	– " –

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
3.	ಕನಕಪುರ ತಾಲ್ಲೂಕು, (ಕನಕಪುರ, ಬೆಂಗಳೂರು ರಾಜ್ಯ ಹೆದ್ದಾರಿ ಹಾಗೂ ಕನಕಪುರ ತಾಲ್ಲೂಕಿನ ಸರಹದ್ದಿನಲ್ಲಿ ಬರುವ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳು)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್.
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 209 ಕಿ.ಮೀ. 30 ರಿಂದ 86 ಕಿ.ಮೀ. ವರೆಗೆ ಮತ್ತು ಕನಕಪುರ ಸಾತನೂರು ಪಟ್ಟಣಗಳ ಮೇಲೆ ಹಾದು ಹೋಗುವ ಮಾರ್ಗದಲ್ಲಿರುವ ರಸ್ತೆ ಬದಿಯ ಹುಣಸೆ ಮರಗಳನ್ನು ಹೊರತುಪಡಿಸಿ)					
4.	ರಾಮನಗರ ತಾಲ್ಲೂಕು (ರಾಮನಗರ ತಾಲ್ಲೂಕಿನಲ್ಲಿ ಬರುವ ಬೆಂಗಳೂರು – ಮೈಸೂರು ರಾಜ್ಯ ಹೆದ್ದಾರಿ ಮತ್ತು ಇದರ ಸರಹದ್ದಿನಲ್ಲಿ ಬರುವ ಎಲ್ಲಾ ಮುಖ್ಯ ರಸ್ತೆಗಳು)	– “ –	– “ –	– “ –	– “ –

V). ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ

1	ಕನಕಪುರ ತಾಲ್ಲೂಕು	– “ –	– “ –	– “ –	– “ –
2	ಮಾಗಡಿ ತಾಲ್ಲೂಕು ಸಾವನದುರ್ಗ ಸ್ಟೇಟ್ ಫಾರೆಸ್ಟ್‌ನಲ್ಲಿ ಸಂಶೋಧನಾ ಉದ್ದೇಶಕ್ಕಾಗಿ ಕಾಯ್ದಿರಿಸಿದ ಬೀಜಗಳನ್ನು ಸಂಗ್ರಹಿಸಲು ಅರಣ್ಯ ಕೃಷಿಕರು ಕೇಂದ್ರ ವಲಯ ಬೆಂಗಳೂರು ಇವರಿಗೆ ಕಾಯ್ದಿರಿಸಿದ ಮರಗಳು ಸೇರಿಕೊಂಡಿರುತ್ತವೆ. ಗ್ರಾಮ ಅರಣ್ಯ ಸಮಿತಿಯ 300 ಹೆಕ್ಟೇರ್ ಪ್ರದೇಶ ಮತ್ತು 280 ಹೆಕ್ಟೇರ್ ಎಂ.ಪಿ.ಸಿ.ಎ. ಹಾಗೂ ಎಂ.ಪಿ.ಡಿ.ಎ. ಪ್ರದೇಶಗಳನ್ನು ಹೊರತುಪಡಿಸಿದೆ.	– “ –	– “ –	– “ –	– “ –

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
3.	ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್.
4.	ರಾಮನಗರ ತಾಲ್ಲೂಕು (ಕೂಟಗಲ್ ಕಿರು ಅರಣ್ಯ ಹೊರತುಪಡಿಸಿದೆ)	– " –	– " –	– " –	– " –
5.	ಚನ್ನಪಟ್ಟಣ ತಾಲ್ಲೂಕು	– " –	– " –	– " –	– " –

ಷರತ್ತುಗಳು

1. ರೂ. 200/– ಮತ್ತು ಇತರೆ ತೆರಿಗೆಗಳನ್ನು ಸಂದಾಯ ಮಾಡಿ ದಿನಾಂಕ: 28–10–2009 ಮದ್ಯಾಹ್ನ 1.00 ಗಂಟೆಯವರೆಗೆ ರಾಮನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಇವರಿಂದ ಟೆಂಡರ್ ಫಾರಂ ಪಡೆಯಬಹುದು. ಭರ್ತಿ ಮಾಡಿದ ಫಾರಂ ಮೇಲೆ ರೂ. 2.00 ಕೋರ್ಟ್ ಫೀ ಸ್ಟಾಂಪ್‌ನ್ನು ಅಂಟಿಸತಕ್ಕದ್ದು. ಹಾಗೆಯೇ ಟೆಂಡರ್ ಫಾರಂನ ಜೊತೆ 5000/– (ಐದು ಸಾವಿರ) ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ.ಯನ್ನು ಪ್ರತಿ ಟೆಂಡರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಹೆಸರಿನಲ್ಲಿ ತೆಗೆದು ಇ.ಎಂ.ಡಿ.ಯಾಗಿ ಲಗತ್ತಿಸತಕ್ಕದ್ದು. ಹಾಗೆಯೇ ಈ ಹರಾಜಿನಲ್ಲಿ ಭಾಗವಹಿಸುವವರು ಸಹಾ ರೂ. 5000/– (ಐದುಸಾವಿರ) ಗಳನ್ನು ನಗದು ರೂಪದಲ್ಲಿ ಇ.ಎಂ.ಡಿ. ಯನ್ನು ಹರಾಜಿಗೆ ಮುನ್ನ ಕೊಡತಕ್ಕದ್ದು.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗದಲ್ಲಿ 2009–10ನೇ ಸಾಲಿಗೆ ನೋಂದಾಯಿಸಿದ ಹಾಗೂ ಅರ್ಹತೆ ಪಡೆದಿರುವ ಅರಣ್ಯ ಗುತ್ತಿಗೆದಾರರಿಗೆ ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿದೆ.
3. ಹಿಂದಿನ ಹರಾಜಿನಲ್ಲಿ ಪಡೆದ ಫಸಲಿನ ಬಾಬ್ತು ಯಾವುದೇ ಹಣ ಬಾಕಿಯಿರುವ ಗುತ್ತಿಗೆದಾರರು ಮೇಲಿನ ಟೆಂಡರ್ / ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರುವುದಿಲ್ಲ.
4. ಬ್ಲಾಕ್ ಲೀಸ್ಟ್ ಆಗಿರುವವರು, ಇನ್‌ಸಾಲ್ವೆಂಟ್, ಡಿಫಾಲ್ಟರ್ಸ್ ಆದವರು ಮತ್ತು ಮೈನರ್ಸ್ ಟೆಂಡರ್ ಸಲ್ಲಿಸುವುದಕ್ಕಾಗಲೀ ಅಥವಾ ಭಾಗವಹಿಸುವುದಕ್ಕೆ ಅರ್ಹರಾಗಿರುವುದಿಲ್ಲ.
5. ಈ ಹರಾಜಿನ ಟೆಂಡರ್‌ಗಳನ್ನಾಗಲೀ, ಹರಾಜನ್ನಾಗಲೀ ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.
6. ಒಪ್ಪಿಕೊಳ್ಳಲಾಗದ ಟೆಂಡರ್ ಹರಾಜಿನ 1/2 ಭಾಗ ಹಣವನ್ನು ಪೂರ್ಣವಾಗಿ ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಗಳೊಂದಿಗೆ ಸ್ಥಳದಲ್ಲಿ ಟೆಂಡರ್ – ಕಂ – ಹರಾಜು ದಿನದಂದೇ ಪಾವತಿ ಮಾಡಬೇಕು. ಇನ್ನು ಮಿಕ್ಕ 1/2 ಭಾಗ ಹಣವನ್ನು ಕರಾರು ಮಾಡಿಕೊಡುವ ದಿನ ಅಥವಾ ಮುಂಚಿತವಾಗಿ ಪಾವತಿಸಬೇಕು. ಇಲ್ಲದಿದ್ದಲ್ಲಿ ಅವರ ಇಂ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆಯಲ್ಲದೇ ಯೂನಿಟ್‌ನ್ನು ಅವರ ಜವಾಬ್ದಾರಿಯಲ್ಲಿ ಹರಾಜು ಮಾಡಲಾಗುವುದು. ಒಂದು ವೇಳೆ ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದು ಸರ್ಕಾರಕ್ಕೆ ನಷ್ಟವಾದಲ್ಲಿ ಸೆಕ್ಷನ್ 109 ರ

ಕರ್ನಾಟಕ ಅರಣ್ಯ ಕಾಯ್ದೆಯಂತೆ ಬಾಕಿ ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು ಹಾಗೂ ಸಾಮಗ್ರಿಗಳ ಮಾರಾಟ ಶಾಸನ ಕಾಯ್ದೆ ಸೆಕ್ಷನ್ 54(4) ರ ಪ್ರಕಾರ ಅಥವಾ ನಾಗರೀಕ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

7. ಕರ್ನಾಟಕ ರಾಜ್ಯದಲ್ಲಿಯ ಸವಾಲುದಾರರನ್ನು ಹೊರತುಪಡಿಸಿ, ಅಥವಾ ಯಾವುದೇ ತರಹದ ಆಸ್ತಿಯು ಕರ್ನಾಟಕ ರಾಜ್ಯದಲ್ಲಿ ಇಲ್ಲದಂಥ ಸವಾಲುದಾರರು ಸವಾಲಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಸವಾಲು ಮಾಡುವ ಅಧಿಕಾರಿಗೆ ತಮ್ಮ ಸವಾಲಿನ ಅರ್ಧ ರಕಂನ್ನು ಜಾರಿಯಲ್ಲಿರುವ ಮಾರಾಟ ಕರ ಮತ್ತು ಅರಣ್ಯಾಭಿವೃದ್ಧಿ ಕರ ಕೊಡಬೇಕು. ಸದರಿ ರಕಂ ಮುಂದಿನ 100/– ರೂಗೆ ಸರಿ ಇರಬೇಕು ಮೇಲೆ ವಿವರಿಸಿದಂತೆ ಯಶಸ್ವಿ ಸವಾಲುದಾರನ್ನು ಶೇ. 50 ಸವಾಲಿನ ರಕಂ ಕಟ್ಟಿದಲ್ಲಿ ಉಳಿದ ಶೇ. 50 ರಕಂ ಚಾಲ್ತಿಯಲ್ಲಿರುವ ಎಲ್ಲಾ ಕರಗಳನ್ನು ಪಾವತಿ ಮಾಡತಕ್ಕದ್ದು ಶೇ 50 ಉಳಿದ ಹಣವನ್ನು ಕರಾರುನಾಮೆ ಸಹಿ ಮಾಡುವುದಕ್ಕಿಂತ ಪೂರ್ವದಲ್ಲಿ ಪಾವತಿ ಮಾಡಬೇಕಾಗುವುದು.

8. ಟೆಂಡರ್‌ದಾರರು ಟೆಂಡರ್ ಫಾರಂನಲ್ಲಿ ಅಥವಾ ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳಿಸಿದ ಪತ್ರವು ಟೆಂಡರ್‌ದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.

9. ಕಿರು ಅರಣ್ಯ ಉತ್ಪನ್ನದ ಯಾವುದೇ ಬಾಬ್ತುನ್ನು ಹರಾಜು ಮಾಡದೇ ಹಿಂಪಡೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಂಪೂರ್ಣ ಹಕ್ಕು ಇರುತ್ತದೆ. ಈ ಸಂಬಂಧ ಟೆಂಡರುದಾರರಾಗಲಿ ಅಥವಾ ಹರಾಜಿನಲ್ಲಿ ಭಾಗವಹಿಸಿದವರಾಗಲೀ ಯಾವುದೇ ಯಾವುದೇ ಪರಿಹಾರ ಧನವನ್ನು ಹಾಗೆ ಹಿಂಪಡೆದ ಹರಾಜಿನ ಬಾಬ್ತು ಕ್ಲೈಮ್ ಮಾಡುವ ಹಕ್ಕು ಇರುವುದಿಲ್ಲ.

10. ಟೆಂಡರುದಾರರು ಟೆಂಡರನ್ನು ಸೀಲು ಮಾಡಿದ ಲಕೋಟೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರಿಗೆ ವಿಳಾಸಿಸಿ ಟೆಂಡರು ಪೆಟ್ಟಿಗೆಗೆ ಹಾಕಬೇಕು. ಎಲ್ಲಾ ಟೆಂಡರುಗಳನ್ನು ಗೋಪ್ಯವಾಗಿ ಇಡಲಾಗುವುದು.

11. ಟೆಂಡರ್ ಲಕೋಟೆ ಮೇಲೆ.. ಇಂತಹ ಬಾಬ್ತುಗಾಗಿ ಟೆಂಡರು ಎಂದು ನಮೂದಿಸಬೇಕು. ಸಾಮಾನ್ಯವಾಗಿ ಒಬ್ಬ ಹೆಚ್ಚು ಟೆಂಡರುಗಳನ್ನು ಹಾಕಿದ್ದಲ್ಲಿ ಹೆಚ್ಚು ದರ ನಮೂದಿಸಿರುವ ಟೆಂಡರನ್ನು ಮಾತ್ರ ಪುರಸ್ಕರಿಸಿ ಉಳಿದ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

12. ಟೆಂಡರುಗಳನ್ನು ಟೆಂಡರಿಗಾಗಿಯೇ ಪ್ರತ್ಯೇಕವಾಗಿ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬೇಕು. ಟೆಂಡರಿನಲ್ಲಿ ಷರತ್ತುಗಳನ್ನು ನಮೂದಿಸಿ ಹಾಕಬಾರದು ಒಂದು ವೇಳೆ ಷರತ್ತು ನಮೂದಿಸಿ ಟೆಂಡರು ಹಾಕಿದ್ದರೆ ಅಂತಹ ಟೆಂಡರುಗಳನ್ನು ತಿರಸ್ಕರಿಲಾಗುವುದು.

13. ಪ್ರತಿಯೊಂದು ಟೆಂಡರಿನ ಜೊತೆಯಲ್ಲಿ ಆದಾಯ ತೆರಿಗೆ ಪಾವತಿ ದೃಢೀಕರಣ ಪತ್ರ ಲಗತ್ತಿಸಬೇಕು.

14. ಮುಂಗಡ ಠೇವಣಿಯನ್ನು ಲಗತ್ತಿಸದೇ ಹಾಕಿರುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

15. ಟೆಂಡರುದಾರರು ಹರಾಜಿನಲ್ಲೂ ಭಾಗವಹಿಸಲು ಅರ್ಹರಿರುತ್ತಾರೆ. ಠೇವಣಿಯನ್ನು ಕಟ್ಟದೆ ಹರಾಜಿನಲ್ಲಿ ಭಾಗವಹಿಸುವಂತಿಲ್ಲ.

16. ಪ್ರತಿ ಯೂನಿಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.

17. ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸಿದಲ್ಲಿ ನಂತರ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.

18. ಬಿಡ್ಡುದಾರರು ಬಿಡ್ಡನ್ನು ಒಪ್ಪಿದಲ್ಲಿ ಬಿಡ್ಡುದಾರರು ಇ.ಎಂ.ಡಿ. ಜೊತೆಗೆ ಪುನಃ ಹರಾಜಿನ ಮೊತ್ತದ ಶೇ. 2ರ ಭಾಗವನ್ನು ಠೇವಣಿಯಾಗಿ ಇಡಬೇಕು.

19. ವಿಫಲ ಟೆಂಡರುದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.

20. ಒಂದು ವೇಳೆ ಬಿಡ್‌ದಾರರು ನಮೂದಿಸಿರುವ ಹಣವನ್ನು ಮೇಲಾಧಿಕಾರಿಗಳು ತಿರಸ್ಕರಿಸಿದಲ್ಲಿ ಅವರು ಕಟ್ಟಿರುವ ಹಣವನ್ನು ತಕ್ಷಣವೇ ಹಿಂತಿರುಗಿಸಲಾಗುವುದು.

21. ಯಶಸ್ವಿ ಟೆಂಡರುದಾರರಿಗೆ ಅವರ ಟೆಂಡರು ಒಪ್ಪಿಗೆಯಾಗಿರುವ ಬಗ್ಗೆ ನೋಂದಾಯಿತ ಅಂಚೆಯ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕಛೇರಿ ಸೂಚನಾ ಫಲಕದಲ್ಲೂ ಅವರ ಹೆಸರನ್ನು ನಮೂದಿಸಲಾಗುವುದು. ಈ ರೀತಿ ಮಾಡಿದ ನಂತರ ಟೆಂಡರ್‌ದಾರರಿಗೆ ಅದರ ಒಪ್ಪಿಗೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಭಾವಿಸಲಾಗುವುದು.

22. ಟೆಂಡರು ಸ್ವೀಕೃತವಾದ ಮಾಹಿತಿ ತಲುಪಿದ 15 ದಿನಗಳಲ್ಲಿ ಟೆಂಡರುದಾರರು ಸಂಬಂಧಿಸಿದ ಘಟಕಗಳ ಅಧಿಕಾರಿಯವರ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಳ್ಳಬೇಕು.

23. ಉಳಿಕೆ ಹಣವನ್ನು ಕಟ್ಟುವಲ್ಲಿ ಟೆಂಡರುದಾರರು ಯಶಸ್ವಿಯಾಗದಿದ್ದಲ್ಲಿ ಅವರ ಟೆಂಡರ್‌ನ್ನು ಕೂಡಲೇ ಸ್ಥಗಿತಗೊಳಿಸಲಾಗುವುದು ಒಂದು ವೇಳೆ ಮಾರಾಟ ಬೆಲೆ ಕಂತುಗಳು ಮತ್ತು ಬಡ್ಡಿಯ ಕಂತುಗಳನ್ನು ಒಂದು ತಿಂಗಳಿಗೂ ಹೆಚ್ಚು ಅವಧಿಗೆ ಕಟ್ಟದಿದ್ದರೆ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

24. ಟೆಂಡರುದಾರರು ವಿಭಾಗೀಯ ಅಧಿಕಾರಿಗಳಿಗೆ ಆಗಿಂದಾಗ್ಯೆ ಅವರು ನೇಮಿಸಿಕೊಂಡಿರುವ ಕೆಲಸಗಾರರ ಹೆಸರು ಮತ್ತು ವಿಳಾಸವನ್ನು ವಿಭಾಗೀಯ ಅಧಿಕಾರಿಗಳಿಗೆ ಸಲ್ಲಿಸುವುದು.
25. ಬೆಳೆಯ ಸಂಗ್ರಹಣೆ ಕೆಲಸವನ್ನು ಮಾಡುವ ಪ್ರತಿಯೊಂದು ನೌಕರರ ಹೆಸರನ್ನು ಗುತ್ತಿಗೆದಾರರು ಅಥವಾ ಅವರಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳಿಂದ ಲಿಖಿತ ಅನುಮತಿಯನ್ನು ತರಬೇಕು.
26. ಅರಣ್ಯ ಇಲಾಖೆಯ ನೌಕರರನ್ನು ವಲಯ ಅರಣ್ಯಾಧಿಕಾರಿಗಳ ಅನುಮತಿಯೊಂದಿಗೆ ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುವುದು.
27. ಬೆಳೆಯನ್ನು ತೆಗೆಯುವ ಕಾಲದಲ್ಲಿ ಗುತ್ತಿಗೆದಾರರು / ನೌಕರರು ಅವರ ನಡುವಳಿಕೆಗೆ ಮತ್ತು ಕೆಲಸದಲ್ಲಿ ನಿರತವಾದ ಎಲ್ಲಾ ನೌಕರರ ನಡವಳಿಕೆಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.
28. ಪ್ರತಿಯೊಬ್ಬ ಖರೀದಿದಾರರು ಪ್ರತಿ ಮಾಹೆಯಲ್ಲಿ ಅವರು ತೆಗೆದ ಉತ್ಪನ್ನದ ಪ್ರಮಾಣದ ಬಗ್ಗೆ ಲೆಕ್ಕ ನೀಡಬೇಕು.
29. ಟೆಂಡರುದಾರರು ಅವರು ಪಡೆದ ಗುತ್ತಿಗೆಯನ್ನು ಯಾರಿಗೂ ಹಸ್ತಾಂತರಿಸುವ ಹಾಗಿಲ್ಲ.
30. ಗುತ್ತಿಗೆದಾರರು ಕೆಲಸಕ್ಕೆ ನೇಮಿಸಿಕೊಂಡ ನೌಕರರಿಗೆ ಏನಾದರೂ ಹಾನಿಯಾದಲ್ಲಿ ಅದನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.
31. ಗುತ್ತಿಗೆಯ ಅವಧಿಯನ್ನು ಒಂದು ನಿಶ್ಚಿತ ಅವಧಿಗೆ ಮಾಡಿದ್ದು ಯಾವುದೇ ಕಾರಣಕ್ಕೂ ಈ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಗುತ್ತಿಗೆಯ ಅವಧಿಯು ಮುಗಿಯುವುದರೊಳಗೆ ಗುತ್ತಿಗೆದಾರರು ಉತ್ಪನ್ನಗಳನ್ನು ತೆಗೆಯತಕ್ಕದ್ದು.
32. ಗುತ್ತಿಗೆದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ಧ ಮಾರ್ಪಾಟುಗಳಿಗೆ ಬದ್ಧರಾಗಿರುತ್ತಾರೆ.
33. ಗುತ್ತಿಗೆದಾರರು ಟೆಂಡರು ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
34. ಮೇಲ್ಕಂಡ ಟೆಂಡರ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ಅರಣ್ಯ ಗುತ್ತಿಗೆದಾರರು ಆಯಾಯ ತಾಲ್ಲೂಕಿನ ವಲಯ ಅರಣ್ಯಾಧಿಕಾರಿಯವರನ್ನು ಸಂಪರ್ಕಿಸಿ ಫಸಲನ್ನು ನೋಡಲು ಅನುಮತಿ ಪಡೆದು ಫಸಲನ್ನು ಪರಿಶೀಲಿಸಿಕೊಳ್ಳಬೇಕು.
35. ಈ ಟೆಂಡರ್–ಕಂ–ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.
36. ಟೆಂಡರ್–ಕಂ–ಹರಾಜಿನಲ್ಲಿ ಯಶಸ್ವಿಯಾದ ಟೆಂಡರ್ / ಹರಾಜಿಗೆ ಅರಣ್ಯ ಗುತ್ತಿಗೆದಾರರಿಗೆ ಸದರಿ ಪ್ರದೇಶದ ಬೆಳೆಯನ್ನು ತೆಗೆಯಲು ಟೆಂಡರ್ ಹರಾಜು ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕೃತವಾದ ನಂತರ ಹಾಗೂ ಸದರಿ ಗುತ್ತಿಗೆದಾರರು ನಿಗದಿತ ಛಾಪಾ ಕಾಗದದ ಮೇಲೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರೊಂದಿಗೆ ಕರಾರು ಮಾಡಿಕೊಂಡ ಮೇಲೆ ಅನುಮತಿ ನೀಡಲಾಗುವುದು.
37. ಪ್ರತಿ ತಾಲ್ಲೂಕಿಗೆ ಬೇರೆ ಬೇರೆ ಟೆಂಡರ್ ಫಾರಂನ್ನು ನಿಗದಿತ ಇ.ಎಂ.ಡಿ ಲಗತ್ತಿಸಿ ಉಪಯೋಗಿಸಬೇಕು.
38. ಟೆಂಡರ್ ಕಂ ಹರಾಜನ್ನು ಸಂಪೂರ್ಣವಾಗಿ ತಿರಸ್ಕರಿಸಿದಲ್ಲಿ ಅಥವಾ ಬಿಡ್ಡುದಾರರು ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ ಕಂ ಹರಾಜನ್ನು ದಿನಾಂಕ: 09–11–2009 ರಂದು ನಡೆಸಲಾಗುವುದು ಹಾಗೂ ಮರು ಟೆಂಡರ್ ಕಂ ಹರಾಜಿಗೆ ಪುನಃ ಯಾವುದೇ ರೀತಿಯ ಪ್ರಕಟಣೆಯನ್ನು ನೀಡಲಾಗುವುದಿಲ್ಲ.

ವಿ. ಗೀತಾಂಜಲಿ

ಪಿ.ಆರ್. 879

ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಕಛೇರಿ

ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ : ಎ6/ಉಅಸಂ/ಟಿಂಬರ್/ಸಿಆರ್–33/2009–10, ದಿನಾಂಕ: 26ನೇ ಸೆಪ್ಟೆಂಬರ್ 2009

ವಿಷಯ: ರಾಮನಗರ ಪ್ರಾದೇಶಿಕ ವಿಭಾಗಕ್ಕೆ ಸೇರಿದ ವಿವಿಧ ನೆಡುತೋಪಿನಲ್ಲಿ ಕಡಿದು ಲಾಟ್ ಮಾಡಿರುವ ನೀಲಗಿರಿ ಟಿಂಬರ್ ಲಾಗ್ ಹರಾಜು ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಚನ್ನಪಟ್ಟಣ ವಲಯದ ವಿವಿಧ ನೆಡುತೋಪುಗಳಲ್ಲಿ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮ, ಬೆಂಗಳೂರು ಇವರ ವತಿಯಿಂದ ಕತ್ರಾವಣೆ ಮಾಡಿ ಇಲಾಖೆಗೆ ಹಸ್ತಾಂತರಿಸಿದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪರಿಮಾಣದ ನೀಲಗಿರಿ ಮರಗಳಿಂದ ಲಭ್ಯವಾದ ಟಿಂಬರ್ ಲಾಟ್ ಮಾಡಿದ್ದು ಇವುಗಳನ್ನು ಬಹಿರಂಗ ಹರಾಜು ಮೂಲಕ ಕೆಳಕಂಡ ಸ್ಥಳ ಹಾಗೂ ದಿನಾಂಕದಂದು ಈ ಕೆಳಸಹಿದಾರರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕೃತ ಅಧಿಕಾರಿಯು ಕೆಳಕಂಡ ಷರತ್ತುಗಳ ಮೇಲೆ ಬಹಿರಂಗ ಹರಾಜನ್ನು ಮಾಡಲು ಉದ್ದೇಶಿಸಿ ಪ್ರಕಟಣೆ ಹೊರಡಿಸಲಾಗಿದೆ. ಇಚ್ಛೆಯುಳ್ಳ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಿ ಈ ಕೆಳಕಂಡ ಷರತ್ತುಗೊಳಪಟ್ಟು ಉತ್ಪನ್ನವನ್ನು ಖರೀದಿಸಬಹುದಾಗಿರುತ್ತದೆ.

ಷೆಡ್ಯೂಲ್

ಕ. ಸಂ	ವಲಯ	ಹರಾಜಿಗೆ ಇಡಲಾಗಿರುವ ಉತ್ಪನ್ನದ ವಿವರಗಳು	ಅಂದಾಜು ಪರಿಮಾಣ	ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
1	ಚನ್ನಪಟ್ಟಣ	ನೀಲಗಿರಿ ನಾಟಾ	47.00 ಘಮೀ	ದಿ: 03–11–2009 ಬೆಳಿಗ್ಗೆ 11.00 ಗಂಟೆಗೆ	ಕೆಂಗಲ್ ನರ್ಸರಿ, ಹನುಮಂತಪುರ

ಷರತ್ತುಗಳು

1. ಆಸಕ್ತ ಖರೀದಿದಾರರು ಈ ಕೆಳಗೆ ನಮೂದಿಸಿದ ಪ್ರಮಾಣದಲ್ಲಿ ಇಂಎಂಡಿ ಮೊತ್ತವನ್ನು ರಾಷ್ಟ್ರೀಕೃತ ಅಥವಾ ಲೋಕಲ್ ಷೆಡ್ಯೂಲ್ ಬ್ಯಾಂಕುಗಳ ಡಿಮಾಂಡ್ ಡ್ರಾಫ್ಟನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪದನಾಮದಲ್ಲಿ ತೆಗೆದು ಸವಾಲಿನ ಪೂರ್ವದಲ್ಲಿ ನಡೆಸುವ ಅಧಿಕಾರಿಗಳ ಬಳಿಯಲ್ಲಿ ನೀಡಬೇಕು, ಹೀಗೆ ನೀಡಲಾದ ಇಎಂಡಿ ಮೊತ್ತವನ್ನು ಯಶಸ್ವಿ ಬಿಡ್ಡುದಾರರು ಖರೀದಿಸಲಾಗುವ ಮರಮುಟ್ಟುಗಳ ಮೌಲ್ಯದ 1/2 ಭಾಗದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
   ಇಎಂಡಿ ಮೊತ್ತ ರೂ. 25,000–00 (ಪ್ರತಿ ಲಾಟಿಗೆ)
2. ಷೆಡ್ಯೂಲ್‌ನಲ್ಲಿ ಸೂಚಿಸಿರುವ ನಿಗಧಿತ ಸಮಯ ಮತ್ತು ದಿನಾಂಕದಂದು ಹರಾಜನ್ನು ನಡೆಸಲಾಗುವುದು. ಒಂದೊಮ್ಮೆ ಸದರಿ ದಿನದಂದು ಹರಾಜು ನಡೆಸಲು ಅನಿವಾರ್ಯ ಕಾರಣಗಳಿಂದ ಸಾದ್ಯವಾಗದಿದ್ದಲ್ಲಿ ಮರು ಹರಾಜನ್ನು ದಿನಾಂಕ: 12–11–2009 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾಗುವುದು.
3. ಇಡಿಗಂಟನ್ನು ಜಮಾ ಮಾಡದೇ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವ ಹಕ್ಕು ಇರುವುದಿಲ್ಲ.
4. ಲಾಟುಗಳಲ್ಲಿ ಒಳಗೊಂಡ ದಿಮ್ಮಿಗಳ ಸಂಖ್ಯೆ ಪರಿಮಾಣಗಳನ್ನು ಘ.ಮೀ.ಗಳಲ್ಲಿ ನಮೂದಿಸಲಾಗುವುದು. ಏಳೆಗಳಿದ್ದಲ್ಲಿ ಸಂಖ್ಯೆಗಳನ್ನು ನಮೂದಿಸಲಾಗುವುದು. ಖರೀದಿದಾರರ ಬೇಡಿಕೆಯು ಸಂಬಂಧಿಸಿದ ಲಾಟ್‌ನ ಮಾಲಿಗೆ ಮಾತ್ರ ಸೀಮಿತವಾಗಿರುತ್ತದೆ.
5. ಷೆಡ್ಯೂಲ್‌ನಲ್ಲಿ ಸೂಚಿಸಿರುವ ಮತ್ತು ಕತ್ತಾವಣೆ ಮಾಡಿ ಲಾಟ್ ಮಾಡಿರುವ ನೀಲಗಿರಿ ಮರಗಳ ಲಾಗ್‌ಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ಹರಾಜಿನಲ್ಲಿ ಭಾಗವಹಿಸಬೇಕು.
6. ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪರಿಮಾಣಕ್ಕೆ ಷೆಡ್ಯೂಲ್‌ನಲ್ಲಿರುವ ಸ್ಥಳಗಳಲ್ಲಿ ಪ್ರತಿ ಲಾಟ್‌ನ್ನು ಪ್ರತ್ಯೇಕವಾಗಿ ಹರಾಜು ಮಾಡಲಾಗುವುದು.
7. ಯಶಸ್ವಿ ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ವಿಲೇವಾರಿ ಮಾಡಿಕೊಳ್ಳತಕ್ಕದ್ದು.
8. ಟಿಂಬರ್ ಲಾಗ್‌ಗಳನ್ನು ಸಾಗಿಸಲು ಪರವಾನಗಿಯನ್ನು ನೀಡಲಾಗುವುದು. ಪರವಾನಗಿ ಶುಲ್ಕವನ್ನು ಯಶಸ್ವಿ ಬಿಡ್ಡುದಾರರು ವಲಯ ಅರಣ್ಯಾಧಿಕಾರಿ, ರಾಮನಗರ ಮತ್ತು ವಲಯ ಅರಣ್ಯಾಧಿಕಾರಿ, ಚನ್ನಪಟ್ಟಣ ಇವರಲ್ಲಿ ಜಮಾ ಮಾಡತಕ್ಕದ್ದು.
9. ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹರಾಜಿನ ದಿನದಂದೇ ತಾವು ಸೂಚಿಸಿದ ಹರಾಜಿನ ಮೊತ್ತದ ಶೇಕಡ 50 ರಷ್ಟು ಹಣವನ್ನು ಹಾಗೂ ಸೂಚಿಸಿದ ಮೊತ್ತಕ್ಕೆ ಅನ್ವಯಿಸುವ ಪೂರ್ಣ ತೆರಿಗೆಯನ್ನು ಅಂದರೆ ವ್ಯಾಟ್ **12.5%**, ಅರಣ್ಯ ಅಭಿವೃದ್ಧಿ ತೆರಿಗೆ **12%**, ಆದಾಯ ತೆರಿಗೆ **2.5%** ಮತ್ತು ಆದಾಯ ತೆರಿಗೆ ಮೇಲೆ ಸೆಸ್ **3%** ರಷ್ಟು ತೆರಿಗೆಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು 2ನೇ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.
10. ಬಹಿರಂಗ ಹರಾಜಿನಲ್ಲಿ ಉದ್ಭವಿಸಬಹುದಾದ ತಂಟೆತಕರಾರುಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.
11. ಕಪ್ಪು ಪಟ್ಟಿಯಲ್ಲಿರುವ ಬಿಡ್‌ದಾರರು ಅಥವಾ ದಿವಾಳಿಯಾಗಿರುವವರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
12. ಹರಾಜಿನ ನಂತರ ಬರುವ ಬೆಲೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
13. ಯಾವುದೇ ತಂಟೆತಕರಾರುಗಳಿದ್ದಲ್ಲಿ ಹರಾಜು ಪ್ರಾರಂಭಿಸುವ ಎರಡು ಗಂಟೆ ಮುಂಚಿತವಾಗಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಲಿಖಿತ ಮೂಲಕ ತರತಕ್ಕದ್ದು ಹಾಗೂ ಹರಾಜಿನ ನಂತರ ತಡವಾಗಿ ಬರುವ ಯಾವುದೇ ತರಹದ ದೂರುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
14. ಯಶಸ್ವಿ ಬಿಡ್‌ದಾರರು ಹರಾಜು ಸ್ಥಿರೀಕರಣ ಆದೇಶ ಪಡೆದ 7 ದಿನಗಳೊಳಗಾಗಿ ನೀಲಗಿರಿ ಟಿಂಬರ್ ಲಾಗ್‌ಗಳನ್ನು ಬಾಕಿ ಇರುವ ಬಿಡ್‌ನ ಮೊತ್ತವನ್ನು ವಲಯ ಅರಣ್ಯಾಧಿಕಾರಿ, ರಾಮನಗರ ಹಾಗೂ ವಲಯ ಅರಣ್ಯಾಧಿಕಾರಿ, ಚನ್ನಪಟ್ಟಣ ಇವರಿಗೆ ಪಾವತಿಸಿ ನೀಲಗಿರಿ ಟಿಂಬರ್ ಲಾಗ್‌ಗಳನ್ನು ತೆಗೆದುಕೊಂಡು ಹೋಗತಕ್ಕದು ನಿಗಧಿತ ಅವಧಿಯಲ್ಲಿ ಟಿಂಬರ್‌ನ್ನು ಸಾಗಿಸದ ಪಕ್ಷದಲ್ಲಿ E.M.D. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಬಿಡ್‌ದಾರರ ಜವಾಬ್ದಾರಿ ಮೇರೆಗೆ ನೀಲಗಿರಿ ಟಿಂಬರ್‌ನ್ನು ಮರು ಹರಾಜು

ಮಾಡಲಾಗುವುದು. ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದು ಸರ್ಕಾರಕ್ಕೆ ನಷ್ಟವಾದಲ್ಲಿ 1963 ರ ಅರಣ್ಯ ಕಾಯ್ದೆ ಸೆಕ್ಷನ್ 109 ರಂತೆ ಬಾಕಿಯನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು ಅಥವಾ ಸರಕು ಸಾಮಗ್ರಿಗಳ ಮಾರಾಟದ ಕಾನೂನಿನನ್ವಯ ಅಥವಾ ಭಾರತೀಯ ದಂಡ ಸಂಹಿತೆ (Civil procedure) ಅನ್ವಯ ಕ್ರಮ ಕೈಗೊಳ್ಳಲಾಗುವುದು.

15. ಈ ಹರಾಜನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.
16. ಕರ್ನಾಟಕ ರಾಜ್ಯದಲ್ಲಿಯ ಸವಾಲುದಾರರನ್ನು ಹೊರತುಪಡಿಸಿ, ಅಥವಾ ಯಾವುದೇ ತರಹದ ಆಸ್ತಿಯು ಕರ್ನಾಟಕ ರಾಜ್ಯದಲ್ಲಿ ಇಲ್ಲದಂಥ ಸವಾಲುದಾರರು ಹರಾಜಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಹರಾಜು ಮಾಡುವ ಅಧಿಕಾರಿಗೆ ತಮ್ಮ ಬಿಡ್‌ನ ಅರ್ಧ ರಕಂನ್ನು ಜಾರಿಯಲ್ಲಿದ್ದ ಮಾರಾಟ ಕರ ಮತ್ತು ಅರಣ್ಯಾಭಿವೃದ್ಧಿ ಕರ ಕೊಡಬೇಕು. ಸದರಿ ರಕಂ ಮುಂದಿನ 100 ರೂಗೆ ಸರಿ ಇರಬೇಕು ಮೇಲೆ ವಿವರಿಸಿದಂತೆ ಯಶಸ್ವಿ ಬಿಡ್‌ದಾರರು ಶೇಕಡಾ 50 ಬಿಡ್‌ನ ರಕಂ ಕಟ್ಟಿದಲ್ಲಿ ಉಳಿದ ಶೇ 50 ರಕಂನ್ನು ಚಾಲ್ತಿಯಲ್ಲಿರುವ ಎಲ್ಲಾ ಕರಗಳೊಡನೆ ಪಾವತಿ ಮಾಡತಕ್ಕದ್ದು ಶೇ 50 ಉಳಿದ ಹಣವನ್ನು ಕರಾರುನಾಮೆ ಸಹಿ ಮಾಡುವುದಕ್ಕಿಂತ ಪೂರ್ವದಲ್ಲಿ ಪಾವತಿ ಮಾಡಬೇಕಾಗುವುದು.
17. ಬಿಡ್ಡುದಾರರು ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳುಹಿಸಿದ ಪತ್ರವು ಬಿಡ್ಡುದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.
18. ಪ್ರತಿ ಲಾಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.
19. ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸಿದಲ್ಲಿ, ನಂತರದ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.
20. ಬಿಡ್ಡುದಾರರು ಬಿಡ್ಡನ್ನು ಒಪ್ಪಿದಲ್ಲಿ ಬಿಡ್ಡುದಾರರು E.M.D ಯ ಜೊತೆಗೆ ಪುನಃ ಹರಾಜಿನ ಮೊತ್ತದ ಶೇ. 2 ರ ಭಾಗವನ್ನು ಠೇವಣಿಯಾಗಿ ಇಡಬೇಕು.
21. ವಿಫಲರಾದ ಬಿಡ್‌ದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.
22. ಒಂದು ವೇಳೆ ಬಿಡ್‌ದಾರರು ನಮೂದಿಸಿರುವ ಹಣವನ್ನು ಮೇಲಾಧಿಕಾರಿಗಳು ತಿರಸ್ಕರಿಸಿದಲ್ಲಿ ಅವರು ಕಟ್ಟಿರುವ ಹಣವನ್ನು ತಕ್ಷಣವೇ ಹಿಂತಿರಿಗಿಸಲಾಗುವುದು.
23. ಯಶಸ್ವಿ ಹರಾಜುದಾರರಿಗೆ ಅವರ ಟೆಂಡರು ಒಪ್ಪಿಗೆಯಾಗಿರುವ ಬಗ್ಗೆ ನೋಂದಾಯಿತ ಅಂಚೆಯ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕಛೇರಿ ಸೂಚನಾ ಫಲಕದಲ್ಲೂ ಅವರ ಹೆಸರನ್ನು ನಮೂದಿಸಲಾಗುವುದು, ಈ ರೀತಿ ಮಾಡಿದ ನಂತರ ಟೆಂಡರ್‌ದಾರರಿಗೆ ಅದರ ಒಪ್ಪಿಗೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಭಾವಿಸಲಾಗುವುದು.
24. ಬಿಡ್ಡುದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ಧ ಮಾರ್ಪಾಟುಗಳಿಗೆ ಬದ್ಧರಾಗಿರುತ್ತಾರೆ.
25. ಬಿಡ್ಡುದಾರರು ಟೆಂಡರ್ ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
26. ಈ ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.

ವಿ. ಗೀತಾಂಜಲಿ

ಪಿ.ಆರ್. 880 ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಟೆಂಡರ್ ಪ್ರಕಟಣೆ (2ನೇ ಕರೆ)

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–2 ರ ಅನ್ವಯ ಗುತ್ತಿಗೆ ಆಹ್ವಾನ)

ಕ್ರ.ಸಂ.ಸನೀ.ವಿ.ಬೆಳಗಾವಿ/ಕಿ.ಇಂ./ಟೆಂಡರ್/2009–10/3300, ದಿನಾಂಕ: 5ನೇ ಅಕ್ಟೋಬರ್ 2009

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ–2000ರ ಅಡಿಯಲ್ಲಿ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಗುತ್ತಿಗೆಯನ್ನು "ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ" ಇವರಿಂದ ಆಹ್ವಾನಿಸಲಾಗಿದೆ. ಗುತ್ತಿಗೆ ಪಡೆಯಲು ಕನಿಷ್ಠ ಅವಶ್ಯಕ ಅರ್ಹತೆಗಳಿಗಾಗಿ ಗುತ್ತಿಗೆದಾರರು ಸೂಚನೆಗಳಲ್ಲಿ ಕಲಂ–3ನ್ನು ಸೂಕ್ಷ್ಮವಾಗಿ ಗಮನಿಸುವಂತೆ ಸೂಚಿಸಲಾಗಿದೆ.

2. ದಿನಾಂಕ:29.10.09 ರಿಂದ 03.11.09ರ ಒಳಗಿನ ಅವಧಿಯಲ್ಲಿ (ಕಛೇರಿ ಕಾರ್ಯಾವಧಿಯಲ್ಲಿ) ಈ ಕೆಳಗೆ ಕಾಣಿಸಿದ ಶುಲ್ಕವನ್ನು (ಹಿಂದಿರುಗಿಸಲಾಗದ) ಯಾವುದಾದರೂ ರಾಷ್ಟ್ರೀಕೃತ ಅಥವಾ ಶೆಡ್ಯೂಲ್ಡ್ ಬ್ಯಾಂಕಿನಿಂದ ಪಡೆದ, ಬೆಳಗಾವಿಯಲ್ಲಿ ನಗದೀಕರಣ ಮಾಡಬಹುದಾದ ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ ಬೆಳಗಾವಿ ಇವರ ಹೆಸರಿನಲ್ಲಿ ಪಡೆಯಲಾದ ಡಿ.ಡಿ., ಪೇ ಆರ್ಡರ್ ಅಥವಾ ನಗದು ರೂಪದಲ್ಲಿ ತುಂಬಿ ಖಾಲಿ ಗುತ್ತಿಗೆ ಪತ್ರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಛೇರಿಯಿಂದ ಪಡೆದುಕೊಳ್ಳಬೇಕು. ಗುತ್ತಿಗೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಆಸಕ್ತ ಗುತ್ತಿಗೆದಾರರು ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಛೇರಿಯಲ್ಲಿ ಪಡೆದುಕೊಳ್ಳಬೇಕು. ಗುತ್ತಿಗೆ ಪತ್ರಗಳನ್ನು ನೊಂದಾಯಿತ ಅಂಚೆ/ವೇಗದ ಅಂಚೆ ಮೂಲಕ ಪಡೆಯಲು ಇಚ್ಛಿಸಿದಲ್ಲಿ ರೂ.200.00ಗಳ ಹೆಚ್ಚುವರಿ ಶುಲ್ಕವನ್ನು ಭರಿಸಬೇಕಾಗುತ್ತದೆ. ಗುತ್ತಿಗೆ ಪತ್ರಗಳನ್ನು ಅಂಚೆ ಮೂಲಕ ಪಡೆಯುವಾಗ ವಿಳಂಬವಾದಲ್ಲಿ ಅಥವಾ ಗುತ್ತಿಗೆ ಪತ್ರಗಳು ಸ್ವೀಕೃತವಾಗದಿದ್ದಲ್ಲಿ ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರು ಹೊಣೆಗಾರರಾಗುವುದಿಲ್ಲ.
3. ಕಾಮಗಾರಿಗಾಗಿ ನಿರ್ದಿಷ್ಟಪಡಿಸಿದ ಈ ಕೆಳಗೆ ನಮೂದಿಸಿದ ಮುಂಗಡ ಠೇವಣಿಯನ್ನು ಗುತ್ತಿಗೆ ಪತ್ರಗಳೊಂದಿಗೆ ಸಲ್ಲಿಸತಕ್ಕದ್ದು. ಗುತ್ತಿಗೆ ಪತ್ರಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೊಂದು ರೂಪದಲ್ಲಿ ಗುತ್ತಿಗೆ ಅರ್ಹತಾ ಅವಧಿಗಿಂತ 45 ದಿನಗಳ ಹೆಚ್ಚುವರಿ ಅವಧಿಯನ್ನು (ಒಟ್ಟಾರೆ 135 ದಿನಗಳ ಅವಧಿ) ಅರ್ಹತಾ ಅವಧಿಯಾಗಿ ಹೊಂದಿರುವ ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಹೆಸರಿನಲ್ಲಿ ಪಡೆದ ಮತ್ತು ಬೆಳಗಾವಿಯಲ್ಲಿ ನಗದೀಕರಣವಾಗುವ ಮುಂಗಡ ಠೇವಣಿಯನ್ನು ಸಲ್ಲಿಸಬೇಕು.
4. ಭರ್ತಿ ಮಾಡಿದ ಗುತ್ತಿಗೆ ಪತ್ರಗಳನ್ನು ದಿನಾಂಕ: 06.11.09ರ ಮಧ್ಯಾಹ್ನ 16.00 ಘಂಟೆಯೊಳಗಾಗಿ (ಕಛೇರಿ ಕಾರ್ಯಾವಧಿಯಲ್ಲಿ) ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಾರ್ಯಾಲಯದಲ್ಲಿ ಸ್ವೀಕರಿಸಲಾಗುವುದು. ಮತ್ತು ಸಾಧ್ಯವಾದಲ್ಲಿ ಅಂದೇ 16.30 ಘಂಟೆಗೆ ಅಥವಾ ಬೇರೆ ಸೂಕ್ತ ದಿನಾಂಕದಂದು ಆಸಕ್ತರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ಗುತ್ತಿಗೆ ಪತ್ರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಾರ್ಯಾಲಯದಲ್ಲಿ ತೆರೆಯಲಾಗುವುದು. ಮೇಲೆ ನಮೂದಿಸಿದ ದಿನಾಂಕಗಳು ಸಾರ್ವತ್ರಿಕ ರಜಾ ಅಥವಾ ಘೋಷಿತ ರಜಾ ದಿನವಾದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ಇನ್ನುಳಿದ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ದಾಖಲೆ (ಕೆಡಬ್ಲ್ಯೂ–2)ದಲ್ಲಿ ವಿವರಿಸಲಾಗಿದ್ದು ಗುತ್ತಿಗೆದಾರರು ನಿಯಮಾವಳಿಗಳನ್ನು ಸಂಪೂರ್ಣ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ.

ಕ್ರಮ ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಡುಗಂಟು ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ ರೂ.+ತೆರಿಗೆ ಪ್ರತ್ಯೇಕ ಹಿಂದಿರುಗಿ ಸಲಾಗದು	ಕೆಲಸವನ್ನು ಮುಗಿಸುವ ಕಾಲಮಿತಿ ಮಳೆಗಾಲ ಸೇರಿ
1	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಯರನಾಳ ಗ್ರಾಮದ ಹತ್ತಿರ ಇಂಗು ಕೆರೆ ನಿರ್ಮಾಣ	39.20	78500/–	4000+Tax	6 ತಿಂಗಳು (ಮಳೆಗಾಲ ಸೇರಿ)

ವ್ಹಿ.ಬಿ. ಕುಲಕರ್ಣಿ
ಪಿ.ಆರ್. 866 ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ನಂ:ಕಾಇಂ:ಲೋವಿ:ಚಿ:ಕಟ್ಟಡಗಳು:09:2009–10, ದಿನಾಂಕ: 5ನೇ ಅಕ್ಟೋಬರ್ 2009

1) ಇ–ಟೆಂಡರ್ ಉಲ್ಲೇಖ: KPWD/2009-10/WORK_INDENT 1354

2) ಇ–ಟೆಂಡರ್ ಉಲ್ಲೇಖ: KPWD/2009-10/WORK_INDENT 1535

ಕರ್ನಾಟಕ ರಾಜ್ಯಪಾಲರ ಪರವಾಗಿ, 1ನೇ ದರ್ಜೆ ಗುತ್ತಿಗೆದಾರರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ. ಗಳಲ್ಲಿ	ಮುಂಗಡ ಠೇವಣಿ ಹಣ ರೂ.ಗಳಲ್ಲಿ
1	ಚಳ್ಳಕೆರೆ ತಾಲ್ಲೂಕು ಚಳ್ಳಕೆರೆ ಪಟ್ಟಣದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡ (ನೆಲ ಅಂತಸ್ತು) ನಿರ್ಮಾಣ	23940663–00	359110–00
2	ಹೊಳಲ್ಕೆರೆ ತಾಲ್ಲೂಕು ಹೊಳಲ್ಕೆರೆ ಪಟ್ಟಣದಲ್ಲಿ ವಿ.ಐ.ಪಿ. ಗೆಸ್ಟ್ ಹೌಸ್ ನಿರ್ಮಾಣ	9426941–13	188539–00

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ	:	21.10.2009 ಸಮಯ: 17.30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	:	23.10.2009 ಸಮಯ: 16.00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	:	27.10.2009 ಸಮಯ: 11.00
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	:	29.10.2009 ಸಮಯ: 11.00

ಸೂಚನೆ: ಈ ಮೇಲ್ಕಂಡ ಕಾಮಗಾರಿಗಳ ಮುಂದೆ ನಮೂದಿಸಿದ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಮೊತ್ತವು ಅಂತಿಮವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–22485867 ರಿಂದ ಮಾಹಿತಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು

ಪಿ.ಆರ್. 858 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ

ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯ ವಲಯ) ಚಿಕ್ಕಬಳ್ಳಾಪುರ

ಸಾರ್ವಜನಿಕ ಪಕಟಣೆ ಸಂಖ್ಯೆ:ಸತೋನಿ(ರಾವ)ಚಿಪುರ:2009–10, ದಿನಾಂಕ: 22ನೇ ಸೆಪ್ಟೆಂಬರ್ 2009

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ ತೋಟಗಾರಿಕೆ ಇಲಾಖೆಯ ವತಿಯಿಂದ RKVY ಯೋಜನೆಯಡಿ ಚಿಕ್ಕದಾಸರಹಳ್ಳಿ ಗೋಡಂಬಿ ಮತ್ತು ಮಾವು ಕ್ಷೇತ್ರ ಹಾಗೂ ಪಸಪಲೋಡು ತೋಟಗಾರಿಕೆ ಕ್ಷೇತಗಳಲ್ಲಿ ವಿವಿಧ ಅಭಿವೃದ್ಧಿ (ಪೋಜನಿ ಆರ್ಚರ್ಡ್) ಕೆಲಸ ಕಾರ್ಯಗಳನ್ನು ನಿರ್ವಹಿಸಲು ಲಕೋಟೆ ಟೆಂಡರ್ ದರಗಳನ್ನು ಆಹ್ವಾನಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತೋಟಗಾರಿಕೆ ಇಲಾಖೆಯ **KSHDA** ಅಧೀನದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರಾಜ್ಯವಲಯದ ಚಿಕ್ಕದಾಸರಹಳ್ಳಿ ಗೋಡಂಬಿ ಮತ್ತು ಮಾವು ಹಾಗೂ ಪಸಪಲೋಡು ತೋಟಗಾರಿಕೆ ಕ್ಷೇತ್ರಗಳಲ್ಲಿ ವಿವಿಧ ಅಭಿವೃದ್ಧಿ (ಪೋಜನಿ ಆರ್ಚರ್ಡ್) ಕೆಲಸ ಕಾರ್ಯಗಳನ್ನು ನಿರ್ವಹಿಸಲು ಲಕೋಟೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಛೆಯುಳ್ಳವರು ಟೆಂಡರ್‌ಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ:23–10–2009 ಮಧ್ಯಾಹ್ನ 2–00 ಗಂಟೆ ಒಳಗೆ ನೀಡಲು ಕೋರಿದೆ. ಟೆಂಡರ್‌ಗಳನ್ನು ಅದೇ ದಿನ ಅಂದರೆ 23–10–2009 ರಂದು ಸಂಜೆ 4–00 ಗಂಟೆಗೆ ಕೆಳ ಸಹಿದಾರರ ಕಛೇರಿಯಲ್ಲಿ ತೆರೆಯಲಾಗುವುದು.

ಕ್ರ. ಸಂ.	ನಿರ್ವಹಿಸಬೇಕಾದ ಕೆಲಸ ಮತ್ತು ಸರಬರಾಜು ಮಾಡಬೇಕಾದ ದಾಸ್ತಾನು ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ
1.	ಜಿಲ್ಲೆಯಲ್ಲಿರುವ ತೋಟಗಾರಿಕೆ ಕ್ಷೇತ್ರದಲ್ಲಿ ಕಾಡು ಗಿಡಗಳನ್ನು ತೆಗೆದು ಸ್ವಚ್ಛಗೊಳಿಸುವುದು (ದಟ್ಟವಾದ ಕಾಡು / ಸಾಧಾರಣ ಕಾಡು) 1) 20 ಹೆ. ಚಿಕ್ಕದಾಸರಹಳ್ಳಿ ಗೋಡಂಬಿ ತೋಟಗಾರಿಕೆ ಕ್ಷೇತ್ರ 2) 02 ಹೆ. ಪಸಪಲೋಡು ತೋಟಗಾರಿಕೆ ಕ್ಷೇತ್ರ 3) 02 ಹೆ. ಚಿಕ್ಕದಾಸರಹಳ್ಳಿ ಮಾವು ತೋಟಗಾರಿಕೆ ಕ್ಷೇತ್ರ ಒಟ್ಟು 24 ಹೆಕ್ಟೇರ್. ಪ್ರತಿ ಹೆಕ್ಟೇರ್‌ಗೆ ದರ ನಮೂದಿಸುವುದು.	2.00	10000–00
2.	ಹಣ್ಣಿನ ಗಿಡಗಳನ್ನು ನಾಟಿ ಮಾಡಲು ವಿವಿಧ ಅಳತೆಯ ಗುಂಡಿಗಳನ್ನು ತೆಗೆಯಲು 2 ಅಡಿ x 2 ಅಡಿ x 2ಅಡಿ ಅಳತೆಯ 1200 ಗುಂಡಿಗಳು 1 ಮೀಟರ್ x 1 ಮೀಟರ್ x 1ಮೀಟರ್ 2400 ಗುಂಡಿಗಳು ಪ್ರತಿ ಗುಂಡಿಗೆ ದರ ನಮೂದಿಸುವುದು.	1.20	
3.	ಕಲ್ಟಿವೇಟರ್ ಮತ್ತು ಎಂ.ಬಿ. ನೇಗಿಲು ನಿಂದ ಉಳುಮೆ ಮಾಡುವುದು. 24 ಹೆಕ್ಟೇರ್ ಪ್ರತಿ ಹೆಕ್ಟೇರ್ ಗೆ ದರ ನಮೂದಿಸುವುದು.	1.50	
4.	ಕೊಟ್ಟಿಗೆ ಗೊಬ್ಬರ 512 ಸಿ.ಎಂ.ಟಿ ಮರಳು 512 ಸಿ.ಎಂ.ಟಿ ಕೆಂಪು ಮಣ್ಣು 512 ಸಿ.ಎಂ.ಟಿ ಪ್ರತಿ ಸಿ.ಎಂ.ಟಿ ಗೆ ದರ ನಮೂದಿಸುವುದು.	4.52	

ಟೆಂಡರ್ ಷೆಡ್ಯೂಲ್: (Tender Schedule)

ಕ್ರ. ಸಂ	ವಿವರಗಳು	ದಿನಾಂಕ	ಸಮಯ	ಸ್ಥಳ
1	ಖಾಲಿ ಟೆಂಡರ್ ಫಾರಂಗಳ ವಿತರಣೆ	12–10–2009 ರಿಂದ 16–10–2009	ಬೆಳಿಗ್ಗೆ 10–30 ರಿಂದ ಸಂಜೆ 5–00 ಗಂಟೆ	ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯ ವಲಯ), ನಂದಿ ಕ್ರಾಸ್, ಚಿಕ್ಕಬಳ್ಳಾಪುರ
2	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	23–10–2009	ಮಧ್ಯಾಹ್ನ 2–00 ಗಂಟೆಗೆ	––ಡಿಟೋ––
3	ಟೆಂಡರ್‌ಗಳನ್ನು ತೆರೆಯುವ ದಿನಾಂಕ	23–10–2009	ಸಂಜೆ 4–00 ಗಂಟೆಗೆ	––ಡಿಟೋ––

ಷರತ್ತುಗಳು:

1. ಟೆಂಡರ್‌ಗಳನ್ನು ನಿಗದಿಪಡಿಸಿದ ಅವಧಿಯೊಳಗಾಗಿ ಲಕೋಟೆಯಲ್ಲಿ ಸಲ್ಲಿಸಬೇಕು. ನಂತರ ಬಂದ ಟೆಂಡರ್‌ಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸಲಾಗುವುದಿಲ್ಲ.
2. ಟೆಂಡರ್‌ಗಳನ್ನು ದಿನಾಂಕ:23–10–2009ರಂದು ಹಾಜರಾಗುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
3. ಟೆಂಡರ್‌ಗಳಲ್ಲಿ ಕೆಲಸದ ಪೂರ್ಣ ವಿವರಣೆಯನ್ನು ಹಾಗೂ ಅದರ ದರವನ್ನು ಸ್ಪಷ್ಟವಾಗಿ ನಮೂದಿಸಬೇಕು. ಹಾಗೂ ತಾವು ಹೊಂದಿರುವ ಟಿನ್ ನಂಬರ್ ಹಾಗೂ ಇತರೇ ಆದಾಯ ತೆರಿಗೆ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ಕಳೆದ ಸಾಲಿನಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ವಿವರಗಳನ್ನು ನೀಡುವುದು.
4. ಟೆಂಡರ್ ದರವನ್ನು ಅನುಮೋದಿಸಿದ ಕೂಡಲೇ ಕಾರ್ಯಾದೇಶ ನೀಡಿದ ಒಂದು ವಾರದಲ್ಲಿ ಕೆಲಸ ಮಾಡಿಕೊಡಬೇಕು. ಯಾವುದೇ ಕಾರಣಕ್ಕೂ ಅವಧಿಯನ್ನು ವಿಸ್ತರಿಸುವ ಅವಕಾಶವಿರುವುದಿಲ್ಲ.
5. ಟೆಂಡರ್‌ನಲ್ಲಿ ನಮೂದಿಸಿರುವ ಕೆಲಸ ಕಾರ್ಯಗಳ ಮತ್ತು ಸರಬರಾಜಿನ ಬಗ್ಗೆ ಇರುವ ತೆರಿಗೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.
6. ಟೆಂಡರ್‌ನಲ್ಲಿ ಮರಳು ಮತ್ತು ಕೆಂಪು ಮಣ್ಣಿಗೆ ಸಂದಾಯಮಾಡಿರುವ ರಾಯಲ್ಟಿ ವಿವರಗಳನ್ನು ನೀಡಬೇಕು. ತಪ್ಪಿದಲ್ಲಿ ಕಾನೂನು ರೀತ್ಯಾ ಲಭ್ಯವಿರುವ ಆದೇಶಗಳನುಸಾರ ರಾಯಲ್ಟಿಯನ್ನು ಬಿಲ್ಲಿನಲ್ಲಿ ನೇರವಾಗಿ ಕಡಿತಗೊಳಿಸಲಾಗುವುದು.
7. ನಿರ್ವಹಣೆ ಮತ್ತು ಸರಬರಾಜಿಗೆ ಸಂಬಂಧಿಸಿದ ಇಲಾಖೆಯ ನಿಯಮಾವಳಿ ಪ್ರಕಾರ ಆದಾಯ ತೆರಿಗೆಯನ್ನು ಬಿಲ್ಲಿನಲ್ಲಿ ಕಟಾಯಿಸಲಾಗುವುದು.
8. ಟೆಂಡರ್‌ಗೆ ಲಗತ್ತಿಸುವ ಇ.ಎಂ.ಡಿಯನ್ನು ಕೆಳ ಸಹಿದಾರರ ಪದನಾಮದಲ್ಲಿ ಪಡೆದಿರಬೇಕು. ಹಾಗೂ ನೀವು ನಿರ್ವಹಿಸುವ ಕಾರ್ಯ ಪೂರ್ಣಗೊಳ್ಳುವ ತನಕ ಮೊತ್ತವನ್ನು ಕಛೇರಿಯಲ್ಲಿ ಕಾದಿರಿಸಲಾಗುವುದು. ಹಾಗೂ ನಿಮ್ಮ ಕಾರ್ಯ ನಿರ್ವಹಣೆ ಮತ್ತು ಸರಬರಾಜಿನಲ್ಲಿ ಯಾವುದೇ ವ್ಯತ್ಯಾಸವಾದಲ್ಲಿ ಇ.ಎಂ.ಡಿ ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಟೆಂಡರ್ ಕಮಿಟಿ ತೀರ್ಮಾನದಂತೆ ಇಲಾಖೆಯಿಂದ ಅನುಮೋದಿಸಿದ ಟೆಂಡರ್‌ದಾರರಿಗೆ ಸರಬರಾಜಿಗೆ ಮತ್ತು ಕೆಲಸ ನಿರ್ವಹಿಸಲು ಆದೇಶವನ್ನು ನೀಡಲಾಗುವುದು.
10. ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕಮಿಟಿಗೆ ಸೀಮಿತಗೊಳಿಸಿದೆ. ಇದರ ಬಗ್ಗೆ ಯಾವುದೇ ಹೆಚ್ಚಿನ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

ಪಿ.ಆರ್. 874 ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಚಿಕ್ಕಬಳ್ಳಾಪುರ.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಮಂಗಳೂರು ವಿಭಾಗ, ಮಂಗಳೂರು–575001

ಹಳೇ ಕಟ್ಟಡ ಸಾಮಗ್ರಿ ವಿಲೇವಾರಿಗಾಗಿ ಟೆಂಡರು ಹಾಗೂ ಹರಾಜು ಪ್ರಕಟಣೆ

ನಂ. ಲೋ.ಬಂ.ಒ.ಜ.ಸಾ.ಇ.:ಮಂ.ವಿ:ಎಇ–2:ಹಳೇಕಟ್ಟಡ ಸಾಮಗ್ರಿ ವಿಲೇವಾರಿ:09–10 ದಿನಾಂಕ: 9ನೇ ಅಕ್ಟೋಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಪುತ್ತೂರು ಸಹಾಯಕ ಕಮೀಷನರ್ ಕಛೇರಿಯ ಹಳೇ ಕಟ್ಟಡದ ಈ ಕೆಳಕಂಡ ಸಾಮಗ್ರಿಗಳನ್ನು "ಎಲ್ಲಿದೆಯೋ" "ಹೇಗಿದೆಯೋ" ಅದೇ ಸ್ಥಿತಿಯಲ್ಲಿ ವಿಲೇವಾರಿಗಾಗಿ ಮೊಹರು ಮಾಡಿದ ಟೆಂಡರು ಕರೆಯಲಾಗಿದೆ. ಟೆಂಡರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರ ಕಛೇರಿಯಲ್ಲಿ ದಿನಾಂಕ:27.10.2009ರ ಸಂಜೆ 4–00 ಗಂಟೆಯವರೆಗೆ ಸ್ವೀಕರಿಸುವರು.

ಕ್ರ. ಸಂ.	ಹಳೇ ಕಟ್ಟಡ ಸಾಮಗ್ರಿಗಳ ವಿವರ		ಠೇವಣಿ (ಟೆಂಡರಿನ ಜೊತೆಗೆ ಡಿ.ಡಿ. ರೂಪದಲ್ಲಿ ಕೊಡ ಬೇಕಾಗಿರುವುದು) ರೂ.ಗಳಲ್ಲಿ	ಟೆಂಡರಿನ ದಾಖಲೆಗಳ ಮೌಲ್ಯ (ಹಿಂದಿರುಗಿಸ ಲಾಗುವುದಿಲ್ಲ) ರೂ.ಗಳಲ್ಲಿ	ಸಾರ್ವಜನಿಕರಿಂದ ಟೆಂಡರು ದಾಖಲೆಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	ಖಾಲಿ ಟೆಂಡರ್ ಫಾರಂ ಗಳನ್ನು ಕೊಡುವ ದಿನಾಂಕ	ಭರ್ತಿ ಗೊಳಿಸಿದ ಟೆಂಡರು ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	ಸಾರ್ವಜನಿಕ ಹರಾಜಿನ ದಿನಾಂಕ	ಸಾಮಗ್ರಿ ಇರುವ ಸ್ಥಳ
1	ಮಂಗಳೂರು ಹಂಚುಗಳು	8811 ಸಂಖ್ಯೆಗಳು							
2	ಸಿಲಿಂಗ್ ಹಂಚುಗಳು	1940 ಸಂಖ್ಯೆಗಳು							
3	ಪಕ್ಕಾಸು ಹಲಗೆ	21.257 ಘ.ಮೀ							
4	ಬೀಮ್ (ತೊಲೆಗಳು)	3.715 ಘ.ಮೀ	12000.00	1100.00	23.10.2009	26.10.2009	27.10.2009	28.10.2009	ಶಿವರಾಮಕಾರಂತರ ಬಾಲವನ, ಪರ್ಲಡ್ಕ, ಪುತ್ತೂರು
5	ಲ್ಯಾಟರೇಟು ಕಲ್ಲುಗಳು 3650 ನಂ (1ಘ.ಮೀ. = 70 ಕಲ್ಲು)	52.14 ಘ.ಮೀ							
6	ನೆಲಹಾಸು ಹಂಚುಗಳು	3975 ಸಂಖ್ಯೆಗಳು							
7	ಮೆಟಲ್ ಜಾಲರಿ ಮೆಶ್	41.47 ಚ.ಮೀ							

ಸೂಚನೆ:–

1. ಟೆಂಡರಿನ ನಿಗದಿತ ನಮೂನೆಯನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಮಂಗಳೂರು ಇವರಿಗೆ ಮೇಲೆ ತಿಳಿಸಿರುವ ದಿನಾಂಕದೊಳಗೆ ಕಾಲಂ 4 ರಲ್ಲಿ ನಮೂದಿಸಿರುವ ನಗದು ಪಾವತಿಸಿ ಪಡೆಯಬಹುದು. ಟೆಂಡರು ದಾಖಲೆಗಳನ್ನು ಅಂಚೆಯ ಮೂಲಕ ಕಳುಹಿಸಲಾಗುವುದಿಲ್ಲ.
2. ಖಾಲಿ ಟೆಂಡರು ದಾಖಲೆಗಳನ್ನು ಸಾರ್ವಜನಿಕರಿಂದ ಮನವಿ ಪತ್ರಗಳನ್ನು ದಿನಾಂಕ:23.10.2009 ರ ವರೆಗೆ ಕಾಲಂ 4 ರಲ್ಲಿ ನಮೂದಿಸಿದ ಮೊಬಲಗಿನೊಂದಿಗೆ ಕೆಲಸದ ದಿನಗಳಂದು ಈ ಕಛೇರಿಯಲ್ಲಿ ಕೆಲಸದ ವೇಳೆ ಪಡೆಯಲಾಗುವುದು. ಖಾಲಿ ಟೆಂಡರು ದಾಖಲೆಗಳನ್ನು ದಿನಾಂಕ:26.10.2009 ರಂದು ಕಛೇರಿಯ ಕೆಲಸದ ವೇಳೆ ಪಡೆಯಬಹುದು. ಟೆಂಡರು ದಾಖಲೆಗಳ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
3. ಮೊಹರು ಮಾಡಿದ ಭರ್ತಿ ಮಾಡಿದ ಟೆಂಡರು ದಾಖಲೆಗಳನ್ನು ಕಾಲಂ 3 ರಲ್ಲಿ ನಮೂದಿಸಿದ ಮೌಲ್ಯವನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಮಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ರೂಪದ ಠೇವಣಿ ಸಹಿತ ದಿನಾಂಕ:27.10.2009 ರಂದು ಅಪರಾಹ್ನ 4.00 ಗಂಟೆಯ ವರೆಗೆ ಈ ಕಛೇರಿಯಲ್ಲಿಟ್ಟಿರುವ ಟೆಂಡರು ಡಬ್ಬಿಯಲ್ಲಿ ಹಾಕಬಹುದು. ನಂತರ ಬಂದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ. ಮೊಹರು ಮಾಡಿದ ಟೆಂಡರುಗಳನ್ನು ಬಹಿರಂಗ ಹರಾಜಿನ ಮುಂದಿನ ದಿನ ದಿನಾಂಕ:29.10.2009 ರಂದು ಕಛೇರಿ ವೇಳೆಯಲ್ಲಿ ಉಪಸ್ಥಿತರಿರುವ ಟೆಂಡರುದಾರರ ಸಮಕ್ಷಮ ತೆಗೆಯಲಾಗುವುದು. ಒಂದು ವೇಳೆ ಮೇಲೆ ತಿಳಿಸಿದ ದಿನಾಂಕದಂದು ನಿಗದಿತ ಸಮಯದಲ್ಲಿ ಟೆಂಡರು ತೆಗೆಯಲು ಸಾಧ್ಯವಾಗದಿದ್ದಲ್ಲಿ ಮುಂದೆ ಅನುಕೂಲವಾಗುವ ದಿನದಂದು ಟೆಂಡರು ತೆಗೆಯಲಾಗುವುದು ಹಾಗೂ ಈ ಬಗ್ಗೆ ಮಾಹಿತಿ ನೀಡಲಾಗುವುದು.
4. ಮೇಲೆ ತಿಳಿಸಿರುವ ದಿನಾಂಕಗಳು ರಜಾ ದಿನಗಳಾದರೆ ಮುಂದಿನ ಕೆಲಸ ದಿನವು ವ್ಯವಹಾರಕ್ಕೆ ಅನ್ವಯಿಸುವುದು.
5. ಯಾವುದೇ ಕಾರಣ ನೀಡದೆ ಟೆಂಡರನ್ನು ಅಂತಿಮವಾಗಿ ಒಪ್ಪುವ ಯಾ ನಿರಾಕರಿಸುವ ಅಥವಾ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ಹೊಂದಿರುತ್ತಾರೆ.
6. ಅತೀ ಹೆಚ್ಚು ಟೆಂಡರ್ ಬೆಲೆ ನಮೂದಿಸಿದ ವ್ಯಕ್ತಿಯು ಟೆಂಡರನ್ನು ತೆಗೆದ ಮೇಲೆ ಸ್ಥಳದಲ್ಲಿಯೇ ಟೆಂಡರ್ ಬೆಲೆಯ ಶೇಕಡಾ 50 ಮತ್ತು ಸರಕಾರದಿಂದ ನಿಗದಿಪಡಿಸಿರುವ ತೆರಿಗೆಯನ್ನು ಠೇವಣಿಯಾಗಿ ಇಡಬೇಕು ಹಾಗೂ ಟೆಂಡರಿನೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರ ಹೆಸರಿನಲ್ಲಿ ಠೇವಣಿ ಮೊತ್ತದ ಡಿ.ಡಿ.ಯನ್ನು ಪಡೆದು ಲಗತ್ತಿಸಿರಬೇಕು. ಇಲ್ಲವಾದಲ್ಲಿ ಅವರ ಟೆಂಡರನ್ನು ನಿರಾಕರಿಸಲಾಗುವುದು.
7. ದಿನಾಂಕ:28.10.2009 ರಂದು ಅಪರಾಹ್ನ 4.30 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪವಿಭಾಗ, ಪುತ್ತೂರು ಇವರು ಸದರಿಯವರ ಕಛೇರಿಯಲ್ಲಿ ಹಳೆ ಕಟ್ಟಡ ಸಾಮಗ್ರಿಗಳ ವಿಲೇವಾರಿಗಾಗಿ ಸಾರ್ವಜನಿಕ ಹರಾಜನ್ನು ನಡೆಸುತ್ತಾರೆ. ಇದರಲ್ಲಿ ಟೆಂಡರು ಹಾಕಲ್ಪಟ್ಟ ವ್ಯಕ್ತಿಗಳ ಸಹಿತ ಯಾರೂ ಭಾಗವಹಿಸಬಹುದು. ಆದರೆ ಟೆಂಡರ್‌ನಲ್ಲಿ ಭಾಗವಹಿಸದವರು ಮೊದಲು ಕಾಲಂ 3 ರಲ್ಲಿ ನಮೂದಿಸಿದ ಮೌಲ್ಯವನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಮಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ರೂಪದ ಠೇವಣಿಯಾಗಿಡತಕ್ಕದ್ದು.
8. ಸಾರ್ವಜನಿಕ ಹರಾಜಿನಲ್ಲಿ ಅತಿ ಹೆಚ್ಚು ಬಿಡ್ ಮಾಡಿದ ವ್ಯಕ್ತಿಯು ಬಿಡ್ ಮೌಲ್ಯದ ಶೇಕಡಾ 50 ಮತ್ತು ಸರಕಾರದಿಂದ ನಿಗದಿಪಡಿಸಿರುವ ತೆರಿಗೆಯನ್ನು ಸ್ಥಳದಲ್ಲಿಯೇ ಠೇವಣಿಯಾಗಿಡಬೇಕು.
9. ಅತೀ ಹೆಚ್ಚಿನ ಟೆಂಡರ್ ಮೊತ್ತದ ಬಿಡ್ದುದಾರರ ಬಿಡ್ಡಿನ ಮೊತ್ತವನ್ನು ಮೇಲಾಧಿಕಾರಿಯವರಿಂದ ಅನುಮೋದನೆ ಪಡೆದ ನಂತರ ಮೇಲಿನ ಹಳೇ ಕಟ್ಟಡ ಸಾಮಗ್ರಿಗಳನ್ನು ವಿಲೇವಾರಿ ಮಾಡಲಾಗುವುದು.
10. ಆಸಕ್ತರು ಸಹಾಯಕ ಕಾರ್ಯಪಾಲಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಪುತ್ತೂರು ಇವರನ್ನು ಸಂಪರ್ಕಿಸಿ, ಮೇಲಿನ ಸಾಮಗ್ರಿಗಳನ್ನು ಕಛೇರಿ ಸಮಯದಲ್ಲಿ ಪರಿಶೀಲಿಸಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು

ಪಿ.ಆರ್. 871